FINANCIAL BUSINESS DEMANDS FOR EXCESS GRANTS

SRI M. VEERAPPA MOILY (Minister for Finance and Tourism).—Mr. Speaker Sir, I beg to present

"Statements showing the demands for Grants to cover expenditure incurred in excess over Voted Grants and Charged Appropriations for the years 1975-76, 1976-77, 1977-78 and 1978-79 as required under Article 205 (i) (b) of the Constitution of India".

MR. SPEAKER.—Statements presented

ಶ್ರೀಮತಿ ಅನುಸೂಯ ಗಜಾನನಶರ್ಮ.—ಮಾನ್ಯ ಅಧ್ಯಕ್ಷರೇ ನಾನು ಕಳೆದ ಅಧಿವೇಶನದಲ್ಲಿ ಮೂರು ಕಾಲಿಂಗ್ ಅಟೆಂಷನ್ ನೋಟೀಸ್‌ಗಳನ್ನು ಕೊಟ್ಟಿದ್ದೆ. ಅದನ್ನು ಶಾರ್ಟ್‌ನೋಟೀಸ್ ಕೊಶ್ಚನ್ ಮಾಡಿದಿರಿ. ಕಳೆದ ಅಧಿವೇಶನದಲ್ಲಿ ಅವಕಾಶ ಸಿಕ್ಕಲಿಲ್ಲ. ಈ ಅಧಿವೇಶನದಲ್ಲೂ ಅವಕಾಶ ಕ್ಕಲಿಲ್ಲ.

ಅಧ್ಯಕ್ಷರು.—ತಾವು ಮೊನ್ನೆ ಬಡ್ಜೆಟ್ ಮೇಲೆ ಮಾತನಾಡುವಾಗ ವಿಷಯವನ್ನು ಪ್ರಸ್ತಾಪ ಮಾಡಿಬಿಟ್ಟಿದ್ದರೆ ಸರ್ಕಾರ ಉತ್ತರ ಹೇಳುತ್ತಿತ್ತು.

ಶ್ರೀಮತಿ ಅನಸೂಯ ಗಜಾನನಶರ್ಮ.—ಮಾನ್ಯ ಅಧ್ಯಕ್ಷರೇ ಅದು ಹಾಗಾಗುವುದಿಲ್ಲ. ಪ್ರಶ್ನೆಗಳಿಗೆ ಈಗಲಾದರೂ ಸರ್ಕಾರದಿಂದ ಉತ್ತರ ದೊರೆಯಬೇಕು. ಶಾರ್ಟ್‌ನೋಟೀಸ್ ಎಂದರೆ ಅರ್ಥವಿಲ್ಲವೇ ?

General Discussion on the Budget for the year 1982-83

† ಶ್ರೀ ಪಿ. ಎನ್. ರೆಡ್ಡಿ (ಮಾಲೂರು)—ಸನ್ಮಾನ್ಯ ಸಭಾಧ್ಯಕ್ಷರೇ ಮಾನ್ಯ ಅರ್ಥಮಂತ್ರಿಗಳ ೧೯೮೨-೮೩ನೇ ಸಾಲಿನ ಆಯವ್ಯಯ ಪತ್ರವನ್ನು ಮಂಡಿಸಿರತಕ್ಕಂಥದ್ದಕ್ಕೆ ನಾನು ಸರ್ವಥಾ ಅನುಮೋದಿಸುತ್ತಾ ನಮ್ಮ ರಾಜ್ಯ ಸರ್ಕಾರವು ಸರಳ ಸಮಾಜದ ಪ್ರಗತಿಗೆ ಎಷ್ಟು ಉನ್ನತವಾದಂಥ ಕಾರ್ಯಕ್ರಮಗಳನ್ನು ಮಾಡುತ್ತಿದೆ ಎನ್ನುವ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಪ್ರಪ್ರಥಮವಾಗಿ ಆಯವ್ಯಯ ಪತ್ರದಲ್ಲಿ ೨೦ ಅಂಶದ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿರುವುದಕ್ಕೆ ನಿಜವಾಗಿಯೂ ಸಂತೋಷ ಪಡತಕ್ಕಂಥ ವಿಚಾರವಾಗಿರುತ್ತದೆಂದು ನನಗನಿಸುತ್ತದೆ. ವಿರೋಧ ಪಕ್ಷದವರು ಆದಾಕ್ಷಣವೇ ಸರ್ಕಾರದವರು ಹಾಕಿಕೊಂಡಿರತಕ್ಕಂಥ ಕಾರ್ಯಕ್ರಮಗಳನ್ನು ವಿರೋಧ ಮಾಡುತ್ತೇವೆಂದು ಹೇಳುವುದಿಲ್ಲ. ಇದು ನಿಜವಾಗಿಯೂ ಬಹಳ ಬೇಸರ ತರತಕ್ಕಂಥ ವಿಷಯ ಮಾನ್ಯ ರಾಮೇಗೌಡರು ಮಾತನಾಡುತ್ತಾ ನಾನು ೨೦ ವರ್ಷಗಳಿಂದ ಚೇರ್‌ಮನ್ ಆಗಿದ್ದೇನೆ; ಒಬ್ಬ ಸರ್ಕಾರಿ ನೌಕರನೂ ಬರುವುದಿಲ್ಲವೆಂದು ಹೇಳಿದಾಗ ಇದು ನಿಜವಾಗಿಯೂ ನಾಚಿಕೆ ಪಡತಕ್ಕಂಥ ವಿಷಯ. ಅವರು ಅಧಿಕಾರದಲ್ಲಿದ್ದಾಗ ೨೦ ಅಂಶಗಳ ಕಾರ್ಯಕ್ರಮಗಳು ಇರಲಿಲ್ಲವೇ ? ಈಗ ನಾನು ಚೇರ್‌ಮನ್ ಆಗಿದ್ದೇನೆ. ಯಾವ ಕಾಲದಲ್ಲಿ ಯಾರೇ ಚೇರ್‌ಮನ್ ಆಗಲಿ ಯಾವುದೇ ಕಾರ್ಯಕ್ರಮಗಳು ಇರಲಿ ಅದು ಚೇರ್‌ಮನ್ ಮೇಲೆ ಹೋಗುತ್ತದೆ. ಅಧಿಕಾರಿಗಳು ತಮ್ಮವರು ಎಲ್ಲರ ಸಮಕ್ಷಮದಲ್ಲಿಯೇ ಎಲ್ಲ ವಿಷಯಗಳನ್ನು ರೆವ್ಯೂ ಮಾಡತಕ್ಕಂಥದ್ದು ಇದ್ದರೂ ಕೂಡ ಅವರು ಏತಕ್ಕೆ ಈ ಮಾತನ್ನು ಹೇಳಿದರೋ ನನಗಂತೂ ಬಹಳ ಅನುಮಾನವಾಗಿದೆ. ಅದೇ ರೀತಿಯಲ್ಲಿ ಮತ್ತೊಂದು ಮಾತನ್ನು ಹೇಳಿದರು, ಇದರಿಂದ ಬಹಳಷ್ಟು ಬೇಸರವಾಯಿತು. ಅದು ಯಾವುದೆಂದರೆ ಮದರ್ ಡೈರಿ ವಿಚಾರ. ಈ ಮದರ್ ಡೈರಿ ವಿಚಾರದಲ್ಲಿ ಕೂಲಂಕುಶವಾಗಿ ಏನು ಸರ್ಕಾರದವರು ಕಾರ್ಯಕ್ರಮಗಳನ್ನು ತೆಗೆದುಕೊಂಡಿರುತ್ತಾರೆ ಎನ್ನುವ ಬಗ್ಗೆ ಗಮನ ಹರಿಸಬೇಕು. ಸರ್ಕಾರದವರು ಈಗಾಗಲೇ ಈ ಯೋಜನೆ ಹಾಕಿಕೊಂಡ ಕಾರ್ಯಕ್ರಮದಂತೆ ಜಮೀನನ್ನು ತೆಗೆದುಕೊಂಡಿದ್ದೇವೆ. ಕೇಂದ್ರ ಸರ್ಕಾರದವರೂ ಕೂಡ ಇದಕ್ಕಾಗಿ ೮ ಕೋಟಿ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಲ್ಯಾಂಡ್ ಅಕ್ವಿಜಿಷನ್ ಪ್ರೊಸಿಡಿಂಗ್ಸ್ ಇದೆ. ಸುಮ್ಮನೆ ಏನೋ ಸರ್ಕಾರವನ್ನು ಯಾವುದೋ ರೀತಿಯಲ್ಲಿ ಮಾತನಾಡಿದರೆ ಎಲ್ಲರಿಗೂ ಬೇಸರತರತಕ್ಕಂಥ ವಿಷಯವಾಗುತ್ತದೆ.

ಮತ್ತೊಂದು ವಿಷಯವನ್ನು ಹೇಳಿದರು. ಡೈರಿ ಕೋ-ಆಪರೇಟೀವ್ ಸೊಸೈಟಿಗಳಲ್ಲಿ ೨೫ ರೂಪಾಯಿಗಳಿದ್ದುದನ್ನು ೧೫ ರೂಪಾಯಿಗಳಿಗೆ ಇಳಿಸಿದರು ಎಂದು. ಅವರು ಕೂಲಂಕುಶವಾಗಿ ಸರ್ಕಾರದ ಇನ್‌ಫರ್‌ಮೇಷನ್ ನೋಡಬೇಕು. ೧೬-೩-೮೨ರಲ್ಲಿ ಮಾಡಿದ್ದಾರೆ ಎಂದು ಹೇಳಿದರು. ೨೫ ರೂಪಾಯಿಯಿಂದ ೧೫ ರೂಪಾಯಿ ೧-೪-೮೨ರಿಂದ ಕಡಿಮೆ ಮಾಡಿದ್ದೇವೆ.

(ಉಪ ಸಭಾಪತಿಯವರು ಅಧ್ಯಕ್ಷರ ಸ್ಥಾನವನ್ನು ಅಲಂಕರಿಸಿದರು)

ಆದ್ದರಿಂದ ಕೂಲಂಕುಶವಾಗಿ ಸರ್ಕಾರದವರು ಏನು ಕಾರ್ಯಕ್ರಮಗಳನ್ನು ಮಾಡುತ್ತಿದೆ ಎನ್ನುವ ಬಗ್ಗೆ ಸರಿಯಾಗಿ ತಿಳಿದುಕೊಂಡು ಭಾಷಣ ಮಾಡಬೇಕು. ಅದನ್ನು ಬಿಟ್ಟು ಏನೋ ಭಾಷಣ ಮಾಡಿದರೆ ನಿಜವಾಗಿಯೂ ಬೇಸರ ತರತಕ್ಕಂಥ ವಿಚಾರವಾಗುತ್ತದೆ.

ಇನ್ನು ಎರಡನೆಯದಾಗಿ ನಮ್ಮ ರಾಜ್ಯ ಸರ್ಕಾರದವರು ಹೆಚ್ಚಿನ ಮಟ್ಟಿಗೆ ಬಡಬಗ್ಗರಿಗೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಅನುಷ್ಠಾನಕ್ಕೆ ತರುತ್ತಿರುವುದು ಹೇಗೆ ಮಾಡುವುದಕ್ಕೆ ಆಗುತ್ತ ದೆಂದರೆ ಕೇಂದ್ರ ಸರ್ಕಾರಕ್ಕೂ ಮತ್ತು ರಾಜ್ಯ ಸರ್ಕಾರಕ್ಕೂ ಬಹಳ ಸಂಪರ್ಕವಿರುತ್ತದೆ. ಈ ಸಂಪರ್ಕ ವಿಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ೧೯೭೫ನೇ ಇಸವಿಯಲ್ಲಿ ಜನತಾ ಸರ್ಕಾರದವರು ಅಧಿಕಾರಕ್ಕೆ ಬಂದರು. ಆ ಸಂದರ್ಭದಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದವರು ಅಧಿಕಾರದಲ್ಲಿದ್ದರು. ಜನತಾ ಸರ್ಕಾರವೆಂದರೆ ಎನ್‌ಕ್ವಯರಿ ಸರ್ಕಾರವೆಂದೇ ಹೇಳಬಹುದು. ಈ ಎನ್‌ಕ್ವಯರಿಗಳಿಗೆ ದುಡ್ಡು ಮಾತ್ರ ವ್ಯರ್ಥವಾಗಿ ಖರ್ಚಾಗುತ್ತಿತ್ತು. ಆದರೆ ಈಗ ಕೇಂದ್ರ ಸರ್ಕಾರದವರು ನಾವು ಅಂದರೆ ರಾಜ್ಯ ಸರ್ಕಾರದವರು ಯಾವುದೇ ಕಾರ್ಯಕ್ರಮಗಳನ್ನು ಹಾಕಿದರೂ ಅದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟುಕೊಂಡು ಬರುತ್ತಿದ್ದಾರೆ. ಇದರಿಂದ ಹೆಚ್ಚಿನ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಸಹಾಯಕವಾಗಿರುತ್ತದೆ. ಸುಮಾರು ನೆನ್ನೆ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿನಲ್ಲಿಯೂ ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡಿದ್ದಾರೆ. ಸುಮಾರು ೧೨ ಲಕ್ಷ ವಸತಿ ಹೀನರನ್ನು ಐಡೆಂಟಿಫೈ ಮಾಡಿ ಸುಮಾರು ಒಂಭತ್ತೂವರೆ ಲಕ್ಷ ಸೈಟ್‌ಗಳನು, ಜನತಾ ಮನೆಗಳನ್ನು ಎನ್.ಆರ್.ಡಬ್ಲ್ಯೂ. ಸ್ಕೀಮ್‌ನಲ್ಲಿ ಕೊಟ್ಟಿದ್ದಾರೆಂದರೆ ನಿಜವಾಗಿಯೂ ಎಲ್ಲರೂ ಸಂತೋಷಪಡತಕ್ಕಂಥ ವಿಷಯವಾಗಿರುತ್ತದೆ. ನನ್ನ ತಾಲ್ಲೂಕನ್ನೇ ತೆಗೆದುಕೊಂಡರೆ ೫೦ ಸ್ಕೂಲ್‌ಗಳಿಗೆ ಕಟ್ಟಡಗಳನ್ನು ಕಟ್ಟಿಸಿಕೊಟ್ಟಿದ್ದಾರೆಂದರೆ ಎಲ್ಲ ಮಂತ್ರಿಗಳು ಮತ್ತು ಶಾಸಕರು ಒಂದು ಸಂತೋಷ ಪಡತಕ್ಕಂಥ ವಿಚಾರವೆಂದೇ ಹೇಳಬೇಕಾಗುತ್ತದೆ. ಇಷ್ಟು ಕೆಲಸಗಳು ಆಗಬೇಕಾದರೆ ಕೇಂದ್ರ ಸರ್ಕಾರಕ್ಕೂ ಹಾಗೂ ರಾಜ್ಯ ಸರ್ಕಾರಕ್ಕೂ ನಿಜವಾಗಿಯೂ ಒಂದು ಒಳ್ಳೆಯ ಸಂಪರ್ಕವಿಲ್ಲದಿದ್ದರೆ ಈ ರೀತಿಯಾಗಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಆಗುತ್ತಲೇ ಇರಲಿಲ್ಲ ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ ಎಲ್ಲ ಕಡೆಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡು ತ್ತೇವೆಂದು ಹೇಳಿರತಕ್ಕಂಥದ್ದು ನಿಜವಾಗಿಯೂ ಸಂತೋಷದ ವಿಚಾರ. ಎಲ್ಲಿ ಕಡಿಮೆ ಇರುತ್ತದೆ ಅಂಥಕಡೆ ಹೆಚ್ಚಿನ ಗಮನ ಕೊಡುತ್ತದೆಂದು ಸರ್ಕಾರದವರು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಎಲ್ಲಾ ಹಳ್ಳಿಗಳಿಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಯಾವ ಅನುಮಾನವಿಲ್ಲದೆ ತರುತ್ತಾರೆಂದು ನಾನು ಹೇಳುವುದರ ಜೊತೆಗೆ ಎಲೆಕ್ಟ್ರಿಸಿಟಿ ಇದನ್ನು ಕೂಡ ಎಲ್ಲ ಹಳ್ಳಿಗಳಿಗೂ ಕೊಡುತ್ತೇ ವೆಂದು ಹೇಳಿರುತ್ತಾರೆ. ಎಲ್ಲ ಹಳ್ಳಿಗಳಿಗೂ ಪಂಚಾಯತಿಗಳಿಗೂ ದುಡ್ಡು ಕೊಡುವುದು ಕಷ್ಟವಾಗುತ್ತ ದೆಂದು ಇಂಥ ಸಂದರ್ಭದಲ್ಲಿ ಆರ್.ಇ. ಸ್ಕೀಮ್ ಜಾರಿಗೊಳಿಸಲು ಕೇಂದ್ರ ಸರ್ಕಾರದವರು ಮುಂದೆ ಬಂದಿರುತ್ತಾರೆ. ಆರ್.ಇ. ಸ್ಕೀಮ್ ಪ್ರಕಾರ ೭೨ ಲಕ್ಷ ೭೨ ಸಾವಿರ ರೂಪಾಯಿಗಳು ಮಂಜೂರಾಗಿದೆ. ಮೂರು ಲಕ್ಷ ಹಳ್ಳಿಗಳಿಗೆ ಇದರಿಂದ ಎಲೆಕ್ಟ್ರಿಸಿಟಿ ಸೌಲಭ್ಯ ದೊರೆಯಲು ಒಂದು ಅವಕಾಶವಾಯಿತು.

ಇನ್ನು ಜೀತ ಪದ್ಧತಿಯ ಬಗ್ಗೆ ಇದನ್ನು ಹೊಗಲಾಡಿಸಲು ಕೇಂದ್ರ ಸರ್ಕಾರದವರು ಮುಂದೆ ಬಂದಿದ್ದಾರೆ. ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಸಹಾಯ ಮಾಡಬೇಕೆಂದು ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಸುಮಾರು ೫೦೧ ಜನರನ್ನು ಐಡೆಂಟಿಫೈಡ್ ಮಾಡಿ ೨೦ ಲಕ್ಷ ೪೮ ಸಾವಿರ ರೂಪಾಯಿಗಳನ್ನು ಕೊಟ್ಟಿದೆ. ಇದರಿಂದ ಸರ್ಕಾರದವರು ಸಮಾಜದ ಬಡಬಗ್ಗರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದಕ್ಕೆ ನಿಜವಾಗಿಯೂ ಕೂಡ ನಾವು ಸಂತೋಷ ಪಡತಕ್ಕಂಥ ವಿಷಯವಾಗಿದೆ. ಒಂದು ಉದಾಹರಣೆಯನ್ನು ಹೇಳುವುದಾದರೆ ಹರಿಜನರಿಗೆ ಜಮೀನುಗಳನ್ನು ಹಂಚುವುದರಲ್ಲಿ ೬೦ ಪರ್ಸೆಂಟ್ ಆದ್ಯತೆಯನ್ನು ಕೊಟ್ಟಿರುವಬಗ್ಗೆ ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ ಹೇಳಿರುತ್ತಾರೆ.

೧೨-೮೦ ಮಧ್ಯಾಹ್ನ

ಆಯವ್ಯಯ ಪತ್ರದಲ್ಲಿ ಏನು ಹೇಳಿದ್ದಾರೆಂದರೆ ಬಡ ಹರಿಜನ ಗಿರಿಜನರಿಗೆ ಸಹಾಯ ಮಾಡಲು ಅವರ ಮನೆಯ ಬಾಗಿಲಿಗೆ ಹೋಗುತ್ತಿದ್ದಾರೆ. ಅವರಿಗೋಸ್ಕರ ಐ.ಆರ್.ಡಿ.ಪಿ. ಪ್ರೋಗ್ರಾಮ್ ಇದೆ. ಈ ಒಂದು ಕಾರ್ಯಕ್ರಮಗಳಲ್ಲಿ ಬಡವರಿಗೆ ಏನು ಅವಶ್ಯಕತೆ ಇದೆ ಎನ್ನುವುದನ್ನು ಕಂಡುಹಿಡಿಯಲು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸರ್ಕಾರಿ ನೌಕರರು ಅವರ ಮನೆಯ ಬಾಗಿಲಿಗೆ ಹೋಗಿ ನಿಮಗೆ ಯಾವ ಸಹಾಯಬೇಕು ? ನಿಮಗೆ ಹಸು ಬೇಕೇ, ಕುರಿ ಕೋಳಿ ಬೇಕೇ, ಎತ್ತುಗಾಡಿ ಬೇಕೇ, ವಿಷುನರಿ ಬೇಕೇ ಎಂದು ಕೇಳಿ ಆಧ್ಯತೆಯ ಮೇಲೆ ಹಂಚುತ್ತಿದ್ದಾರೆ. ಜೊತೆಗೆ ರಾಷ್ಟ್ರೀಕೃತ ಬ್ಯಾಂಕುಗಳು ಸಹ ಸಹಾಯ ಮಾಡಲು ಮುಂದೆ ಬರುತ್ತಿವೆ. ಸರಳ ಸಮಾಜಿಕ ಪದ್ಧತಿಯಲ್ಲಿ ಆಧ್ಯತೆಯನ್ನು ಕೊಟ್ಟು ಕೆಲಸಕಾರ್ಯಗಳನ್ನು ಮಾಡಲಾಗುತ್ತಿದೆ. ಮಾನ್ಯ ಸದಸ್ಯರಾದ ರಾಮೇಗೌಡರು ಮಾತನಾಡುವಾಗ ಅವರು ಏತಕ್ಕೆ ಆ ರೀತಿ ಮಾತನಾಡಿದರೋ ನನಗೆ ಗೊತ್ತಾಗಲಿಲ್ಲ. ಗುದ್ದಲಿ, ಪಿಕಾಸಿ, ಆರೆ, ಸನಿಕೆ ಇವುಗಳನ್ನು ಏತಕ್ಕೆ ಕೊಡುತ್ತೀರಿ ಎಂದು ಪ್ರಶ್ನೆ ಮಾಡಿದ್ದಾರೆ. ಅವರೂ ಕೂಡ ರೈತರೇ ಗುದ್ದಲಿ, ಪಿಕಾಸಿ, ಆರೆ ಇವೆಲ್ಲಾ ವ್ಯವಸಾಯ ಮಾಡಲು ಉಪಯುಕ್ತವಾದ ವಸ್ತುಗಳು. ಜೊತೆಗೆ ಬಡ ಜನರು ಅವಶ್ಯಕ ವಸ್ತುಗಳು ಇಲ್ಲದೆ ಎಷ್ಟೋ ಜನ ತೊಂದರೆಗೆಡಾಗಿದ್ದಾರೆ. ಆದ್ದರಿಂದ ಬಡವರಿಗೆ ಇಂತಹ ಸಲಕರಣೆಗಳನ್ನು ಒದಗಿಸಿ ಕೊಟ್ಟರೆ ತಮ್ಮ ವ್ಯವಸಾಯವನ್ನು ಮಾಡಿಕೊಳ್ಳುವುದರೊಂದಿಗೆ ಕೂಲಿ ಮಾಡಲು ಸಹ ಅನುಕೂಲವಾಗುತ್ತದೆ. ನಮ್ಮ ಸರ್ಕಾರ ಉದ್ಯೋಗ ದೃಢೀಕರಣ ಯೋಜನೆಯ ಮೇರೆಗೆ ಬಡವರಿಗೆ ಕೂಲಿ ಕೊಡಲಾಗುತ್ತಿದೆ. ಕೂಲಿ ಮಾಡತಕ್ಕವರಿಗೆ ಕೂಲಿ ಕೊಡಲಾಗುತ್ತದೆಯೇ ಹೊರತು ಸಲಕರಣೆಗಳನ್ನು ಕೊಡುವುದಿಲ್ಲ. ಕೂಲಿ ಕೆಲಸಗಳಿಗೆ ಹೋಗಬೇಕಾದರೆ ಗುದ್ದಲಿ, ಆರೆ, ಪಿಕಾಸಿ, ಸಲಿಕೆ ಇವುಗಳು ಬೇಕೇ ಬೇಕು. ಇಂತಹ ಸಲಕರಣೆಗಳನ್ನು ಒದಗಿಸಿದಾಗ ಅವರು ಕೂಲಿಗೆ ಹೋಗಲು ಅನುಕೂಲವಾಗುತ್ತದೆ. ಮಾನ್ಯ ಸದಸ್ಯರಾದ ನಾನಯ್ಯನವರು ಮಾತನಾಡುವಾಗ ''ಗೃಹ ಕಲ್ಯಾಣ'' ಯೋಜನೆಯ ಬಗ್ಗೆ ಬಹಳ ತಮಾಷೆಯಾಗಿ ಮಾತನಾಡುತ್ತಿದ್ದರು. ಮಹಿಳೆಯರು ಎಷ್ಟು ಕಷ್ಟದಲ್ಲಿದ್ದಾರೆಂಬುದು ಅವರಿಗೆ ಗೊತ್ತಿಲ್ಲ. ''ಗೃಹ ಕಲ್ಯಾಣ'' ಎಂಬ ಸಮಗ್ರ ಯೋಜನೆಯು ಮುಖಾಂತರ ವಿಧವೆಯರಿಗೆ, ನಡತೆಗೆಟ್ಟ ಮತ್ತು ನಿರ್ಗತಿಕ ಮಹಿಳೆಯರು ಸುಭದ್ರ ಕುಟುಂಬ ಜೀವನ ನಡೆಸಲು ಯೋಜನೆಯ ಪ್ರಯೋಜನವನ್ನು ವಿಸ್ತರಿಸಲಾಗುವುದು. ಗುಡಿ ಕೈಗಾರಿಕೆಗಳಿಗೆ ಹೆಚ್ಚು ಹಣವನ್ನು ಒದಗಿಸಲು ಮಹಿಳಾ ಸಂಘಗಳಿಗೆ ಹಣವನ್ನು ಕೊಡಲಾಗುತ್ತದೆ. ಸರ್ಕಾರದ ಉದ್ದೇಶವಾದರೂ ಇಷ್ಟೇ ಅವರು ಒಂದು ಸಂತೋಷದ ಜೀವನ ನಡೆಸಬೇಕು. ನಾನು ಸಾಯುವಾಗ ಯಾರಿದ್ದಾರೆ ನಾನು ಏನು ಮಾಡುವುದು ? ಹೇಗೆ ಜೀವನ ಸಾಗಿಸುವುದು ಎನ್ನುವ ಬಗ್ಗೆ ಚಿಂತೆ ಮಾಡದಿರುವಂತೆ ಈ ಒಂದು ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಆಂಧ್ರ ಸರ್ಕಾರದಲ್ಲೂ ಕೂಡ ಮಾಡಲಾಗುತ್ತಿದೆ. ಅವರಿಗೆ ೧೦೦ ರೂಪಾಯಿ ಕೊಟ್ಟರೆ ಅವರು ಯಾವ ಚಿಂತೆಯನ್ನು ಮಾಡದೆ ಎರಡೊತ್ತು ಊಟ ಮಾಡಿಕೊಂಡು ಹೆಂಗಸರು ಜೀವನ ಮಾಡಿಕೊಳ್ಳುತ್ತಾರೆ. ಮಾನ್ಯ ಸದಸ್ಯರು ಅಕಸ್ಮಾತ್ತಾಗಿ ಹೇಳಿದ್ದಾರೋ ಅಥವಾ ಯಾವರೀತಿಯ ಊಹಾಪೋಹವನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದ್ದಾರೋ ಗೊತ್ತಿಲ್ಲ.

'ಜ್ಞಾನ ಮಂದಿರ' ಸ್ಕೀಮ್ ಇದು ಎಂತಹ ಯೋಜನೆ. ಇದು ಸಂತೋಷಪಡತಕ್ಕ ಯೋಜನೆ. ಬಡಜನರು ಹರಿಜನ ಗಿರಿಜನರು ಒಂದೇ ಕಡೆ ಕುಳಿತುಕೊಂಡು ಓದುವ ಅವಕಾಶ ಎಲ್ಲಿತ್ತು ? ಜ್ಞಾನ ಮಂದಿರ ಯೋಜನೆ ಮಾಡಿರುವುದರಿಂದ ಬಡಜನರು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಜೊತೆಗೆ ಲೈಬ್ರರಿ ಮಾಡಿ ೧ ಸಾವಿರ ರೂಪಾಯಿಗಳನ್ನು ಕೊಡಲಾಗುತ್ತಿದೆ. ಭಾಗ್ಯಜ್ಯೋತಿ ಯೋಜನೆಯನ್ನು ಮಾಡಿ ತಾಲ್ಲೂಕಿಗೆ ಪ್ರತಿ ಸಲ ೩೦೦ ಮನೆಗಳಿಗೆ ವಿದ್ಯುಚ್ಛಕ್ತಿ ಒದಗಿಸಿ ಕೊಡಲಾಗುತ್ತಿದೆ. ಬಡ ಹರಿಜನರಿಗೆ ಮನೆಗಳಿಗೆ ದೀಪ ಒದಗಿಸಿಕೊಡತಕ್ಕದ್ದು ನನಗಂತೂ ಬಹಳ ಸಂತೋಷವಾದ ವಿಷಯ. ಉತ್ತಮವಾದ ಕೆಲಸಗಳನ್ನು ತಾವು ಮಾಡಿದ್ದಾರೆಂದೂ ಹೇಳಿ. ಮಾಡತಕ್ಕ ಕೆಲಸಗಳಲ್ಲಿ ಕೆಲವು ಲೋಪದೋಷಗಳಿರಬಹುದು, ಉತ್ತಮವಾದ ಕೆಲಸಗಳನ್ನು ಉತ್ತಮವಾಗಿವೆ ಎಂದು ಹೇಳಬೇಕು ಮಾನವೀಯತೆಯ ದೃಷ್ಟಿಯಿಂದ ನಿಜವಾಗಿಯೂ ಬಡಜನರಿಗೆ ಒಳ್ಳೆಯ ಕೆಲಸ ಮಾಡಲಾಗುತ್ತಿದೆ.

ಇನ್ನು ನಮ್ಮ ಅರ್ಥಮಂತ್ರಿಗಳು ಕಳೆದ ವರ್ಷ ಒಂದು ಆಶ್ವಾಸನೆ ಕೊಟ್ಟಿದ್ದಾರೆ. ಅದೇನೆಂದರೆ ಕಾಲೇಜು ಅಧ್ಯಾಪಕರುಗಳಿಗೆ ಪ್ರಮೋಷನ್ ಕೊಡುವ ವಿಚಾರದಲ್ಲಿ. ಅವರುಗಳಿಗೆ ಟೈಮ್ ಬಾಂಡ್ ಪ್ರಮೋಷನ್ ಕೊಡದೆ, ಟೈಮ್ ಬಾಂಡ್ ಅಲೋಯನ್ಸಸ್ ಕೊಟ್ಟಿದ್ದಾರೆ. ಕಾಲೇಜ್ ಅಧ್ಯಾಪಕರುಗಳಿಗೆ ಟೈಮ್ ಬಾಂಡ್ ಪ್ರಮೋಷನ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಧ್ಯಾಪಕರಾಗಿ ಕೆಲಸ

ಮಾಡಿದ ಮೇಲೆ ರೀಡರ್ ಆಗಿ ನೇಮಕ ಮಾಡಬೇಕೆಂದು ಕೇಳಿಕೊಂಡಿದ್ದಾರೆ. ನಿಜವಾಗಿಯೂ ಕಾಲೇಜು ಅಧ್ಯಾಪಕರುಗಳ ಬಗ್ಗೆ ಗಮನಕೊಡಬೇಕಾಗಿದೆ. ಅರ್ಥಮಂತ್ರಿಗಳವರಲ್ಲಿ ಕೇಳಿಕೊಳ್ಳುವುದೇನೆಂದರೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡತಕ್ಕವರಿಗೆ ಒಂದು ವರ್ಷದಿಂದ ಪ್ರವಾಸಭತ್ಯ ಮತ್ತು ತುಟ್ಟಿಭತ್ಯಗಳನ್ನು ಕೊಟ್ಟಿರುವುದಿಲ್ಲ. ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಅವಶ್ಯಕತೆ ಇರತಕ್ಕ ಹಣವನ್ನು ಕೊಡದಿದ್ದರೆ ಅವರು ಕೆಲಸ ಮಾಡುವುದು ಕಷ್ಟವಾಗುತ್ತದೆ. ಎಕ್ಸಾಮಿನೇಷನ್ ನಡೆಸುವುದು ಮತ್ತು ಮೌಲ್ಯಮಾಪನ ನಡೆಸುವುದು ತಡವಾಗುತ್ತದೆ. ನಿಗದಿಯಾದ ವೇಳೆಯಲ್ಲಿ ನಡೆಯಬೇಕಾಗಿರುವ ಪರೀಕ್ಷೆಗಳು ಸರಿಯಾದ ಕಾಲಕ್ಕೆ ನಡೆಯದೆ ಮುಂದು ಮುಂದಕ್ಕೆ ಹೋಗಿ ಬಹಳ ತೊಂದರೆಯಾಗುತ್ತದೆ. ಮೌಲ್ಯಮಾಪನ ಮಾಡುವುದು ತಡವಾಗುತ್ತದೆ. ಬೆಂಗಳೂರು ವಿಶ್ವವಿದ್ಯಾನಿಲಯದ ಬಗ್ಗೆ ಗಮನಹರಿಸಿ ಕೊಡಬೇಕಾಗಿರುವ ಹಣವನ್ನು ಸರ್ಕಾರ ಬೇಗ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮೌಲ್ಯಮಾಪಕರಿಗೆ ಸರಿಯಾದ ವೇಳೆಗೆ ಹಣ ಕೊಡದೇ ಹೋದರೆ ಅವರು ಮೌಲ್ಯಮಾಪನ ಮಾಡುವುದಿಲ್ಲ. ಅಲ್ಲಿ ಕೆಲಸ ಮಾಡತಕ್ಕ ಸಿಬ್ಬಂಧಿ ಕೂಡ ಆಸಕ್ತಿಯಿಂದ ಕೆಲಸಮಾಡುವುದಕ್ಕೆ ಉತ್ಸಾಹವಿರುವುದಿಲ್ಲ. ಸರಿಯಾದ ಅವಧಿಯಲ್ಲಿ ಅವರಿಗೆ ಕೊಡಬೇಕಾದ ಹಣವನ್ನು ಸರ್ಕಾರ ಬೇಗ ಕೊಡಬೇಕೆಂದು ಮತ್ತೊಮ್ಮೆ ಕೇಳುತ್ತೇನೆ.

ಬೆಂಗಳೂರಿನಲ್ಲಿ ಇತ್ತೀಚೆಗೆ ಎಲ್ಲಿ ನೋಡಿದರೂ ಒಂದು ಸೀರೆ ತೆಗೆದುಕೊಂಡರೆ ೨ ಸೀರೆ ಕೊಡಲಾಗುತ್ತದೆಂದು ಜಾಹೀರಾತು ಮತ್ತು ಪ್ರದರ್ಶನ ಮಾರಾಟ ಏರ್ಪಡಿಸಿರುತ್ತಾರೆ. ಶೇಕಡ ೫೦ ರಷ್ಟು ಕಡಿತವೆಂದು ಮಾರುವುದು ಸೇಲ್ಸ್‌ಟ್ಯಾಕ್ಸ್ ತಪ್ಪಿಸಿಕೊಳ್ಳುವುದಕ್ಕೆಂದು ನನಗೆ ಅನುಮಾನ ಬಂದಿದೆ. ಒಂದು ಸೀರೆ ತೆಗೆದುಕೊಂಡರೆ ಇನ್ನೊಂದು ಸೀರೆ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಎರಡು ಸೀರೆಗಳನ್ನು ಕೊಡುವುದಕ್ಕೆ ಹೇಗೆ ಸಾಧ್ಯ ? ಆ ರೀತಿ ಕೊಡುವುದಕ್ಕೆ ಆಗುತ್ತದೆಯೇ ?. ಇದು ಏನೋ ಚೀಟಿಂಗ್ ಇರಬೇಕು ಇದರಿಂದ ಜನಗಳಿಗೆ ತೊಂದರೆಯಾಗುತ್ತಿದೆ. ಸೀರೆಗೆ ಎಷ್ಟು ಬೆಲೆ ಬಾಳುತ್ತದೆಯೋ ಅಷ್ಟೆ ಬೆಲೆ ಹಾಕಿರುತ್ತಾರೆ. ಅವೆನ್ಯೂ ರಸ್ತೆಗೆ ಹೋಗಿ. ಬಳೇಪೇಟೆಗೆ ಹೋಗಿ ಬೆಂಗಳೂರಿನಲ್ಲಿ ಎಲ್ಲಿ ನೋಡಿದರೂ ೫೦ ಪರ್ಸೆಂಟ್ ರಿಡಕ್ಷನ್. ಹೇಗೆ ಕೊಡುವುದಕ್ಕೆ ಸಾಧ್ಯ ? ಯಾರು ಆ ರೀತಿ ಬಟ್ಟೆಗಳನ್ನು ಮಾರುವುದಕ್ಕೆ ಆಗುವುದಿಲ್ಲ. ಇದರಲ್ಲಿ ಏನೋ ಕುತಂತ್ರ ಇದೆ. ಇದು ನಿಜವಾಗಿಯೂ ಅನುಮಾನಸ್ಪದವಾದ ಕೆಲಸ ಇದು ಹಗಲು ದರೋಡೆಯಾಗಿದೆ. ಇದು ಜನಗಳಿಗೆ ಮೋಸ ಮಾಡತಕ್ಕ ಕೆಲಸವಾಗಿದೆ.

ಇನ್ನು ಆಹಾರ ಪದಾರ್ಥಗಳ ವಿತರಣೆಯ ವಿಷಯವಾಗಿ ಹೇಳಬೇಕೆಂದರೆ ತಾಲ್ಲೂಕು ಮಟ್ಟಗಳಲ್ಲಿ ವಿತರಣೆ ಮಾಡುವಾಗ ಸೂಪರ್‌ವಿಷನ್ ಮಾಡಬೇಕಾಗುತ್ತದೆ. ಆಹಾರ ಪದಾರ್ಥ ವಿತರಣಾ ಕ್ರಮ ಹಳ್ಳಿಗಳಲ್ಲಿ ಬಹಳ ಕಷ್ಟವಾಗುತ್ತಿದೆ. ಹಳ್ಳಿಯಲ್ಲಿರತಕ್ಕ ಮುಗ್ಧಜೀವಿಗಳಿಗೆ ಸಕ್ಕರೆ ಎಷ್ಟು ಬರುತ್ತದೆ ? ಅಕ್ಕಿ ಇತರೆ ಸಾಮಾನು. ಸೀಮೆಎಣ್ಣೆ ಎಷ್ಟು ಬರುತ್ತದೆಂಬುದು ಗೊತ್ತಾಗುವುದಿಲ್ಲ. ಆದ್ದರಿಂದ ಹಳ್ಳಿಗಳಲ್ಲಿ ವಿತರಣೆ ಮಾಡತಕ್ಕ ಕೇಂದ್ರಗಳಾದ ಸೊಸೈಟಿ ಸರ್ಕಾರಿ ನ್ಯಾಯಬೆಲೆ ಅಂಗಡಿಗಳಲ್ಲಿ ಶಾಸಕರ ಮತ್ತು ಪಂಚಾಯಿತಿ ಅಧ್ಯಕ್ಷರ ಸಮಕ್ಷಮದಲ್ಲಿ ಈ ತಿಂಗಳು ಇಷ್ಟು ಸಕ್ಕರೆ, ಅಕ್ಕಿ, ಜೋಳ, ಸೀಮೆಎಣ್ಣೆ ಬಂದಿದೆ ಎಂದು ಡಂಗುರ ಮಾಡಿಸಬೇಕು. ಕೋಟ ಎಷ್ಟು ಬಂತು ಅದರ ಬೆಲೆ ಎಷ್ಟು ಎಂದು ಗೊತ್ತು ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ ಹಳ್ಳಿಯ ಮುಗ್ಧಜೀವಿಗಳಿಗೆ ಯಾವುದೂ ಗೊತ್ತಾಗುವುದಿಲ್ಲ. ಎಷ್ಟು ಮುಂತುವರ್ಜಿ ತೆಗೆದುಕೊಂಡರೂ ಅವರು ಏನು ಮಾಡುತ್ತಾರೆ ಎಂದು ಗೊತ್ತಾಗುವುದಿಲ್ಲ. ಇನ್ನೂ ಹೆಚ್ಚಿನ ರೀತಿಯಲ್ಲಿ ಮುಂತುವರ್ಜಿ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ಸರ್ಕಾರ ಉತ್ತಮವಾದ ಕೆಲಸಗಳನ್ನು ಮಾಡುತ್ತಿದೆ. ನಾನು ಮಾತನಾಡುವಾಗ ನೋಟ್ ಮಾಡಿಕೊಳ್ಳಲು ಮಂತ್ರಿಗಳಾರು ಇಲ್ಲ. ಮಾನ್ಯ ಆರೋಗ್ಯಮಂತ್ರಿಗಳು ನೋಟ್ ಮಾಡಿಕೊಳ್ಳುತ್ತಿದ್ದಾರೋ ಏನೋ ಗೊತ್ತಿಲ್ಲ.

ಆರೋಗ್ಯಮಂತ್ರಿಗಳು ಸ್ವಲ್ಪ ಇತ್ತ ಗಮನಹರಿಸಬೇಕು. ಅವರಲ್ಲಿ ನಾನು ವಿನಯಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ ನನ್ನ ತಾಲ್ಲೂಕಿಗೆ ಡಾಕ್ಟರುಗಳು ಬೇಕು. ಡಾಕ್ಟರುಗಳ ಪೋಸ್ಟಿಂಗ್ ಇಲ್ಲದೆ ಬಹಳ ತೊಂದರೆಯಾಗಿದೆ. ಇದ್ದಂತಹ ಡಾಕ್ಟರುಗಳನ್ನು ಎಂ. ಡಿ. ಟ್ರೈನಿಂಗ್‌ಗೆ ಕಳುಹಿಸಿದ್ದೀರಿ, ಆ ಹುದ್ದೆಗಳನ್ನು ಇನ್ನೂ ನೇಮಕ ಮಾಡಿಲ್ಲ. ಒಂದೆರಡು ತಿಂಗಳುಗಳಿಂದ ಡಾಕ್ಟರುಗಳಿಲ್ಲದೆ ನಮಗೆ ಬಹಳ ಕಷ್ಟವಾಗುತ್ತಿದೆ. ಮಾಲೂರಿನಲ್ಲಿ ಇದ್ದ ಒಬ್ಬ ಲೇಡಿ ಡಾಕ್ಟರು ಅವರು ಕೂಡ ಎಂ.ಡಿ. ಟ್ರೈನಿಂಗ್‌ಗೆ ಕಳುಹಿಸಿದ್ದಾರೆ. ನಮ್ಮಲ್ಲಿದ್ದ ಎಲ್ಲಾ ಡಾಕ್ಟರುಗಳನ್ನು ಟ್ರೈನಿಂಗ್‌ಗೆ ಕಳುಹಿಸಿದ್ದಾರೆ. ಎಲ್ಲರನ್ನು

ರಿಲೀವ್ ಮಾಡಿದ್ದಾರೆ, ಇನ್ನೂ ಫಿಲಅಪ್ ಮಾಡಿಲ್ಲ. ನಮ್ಮಲ್ಲಿ ಮಲೇರಿಯಾ ಜ್ವರ ಶುರುವಾಗಿದೆ, ಇದರ ಕಡೆಗೆ ಹೆಚ್ಚಿನ ಆಧ್ಯತೆ ಕೊಟ್ಟಹಾಗೆ ಕಾಣುತ್ತಿಲ್ಲ. ನಮ್ಮ ಆಸ್ಪತ್ರೆಗಳಲ್ಲಿ ಎಲ್ಲೂ ಸೊಳ್ಳೆಪರದೆ ಕಾಣುತ್ತಿಲ್ಲ. ನಮ್ಮ ಆಸ್ಪತ್ರೆಗಳಿಗೆ ಹೆಚ್ಚಿನ ರೀತಿಯಲ್ಲಿ ಸೌಕರ್ಯಗಳನ್ನು ಒದಗಿಸಿ ಕೊಡಬೇಕು. ನಮ್ಮಲ್ಲಿ ಗೋಶ ಹೆಂಗಸರು ಜಾಸ್ತಿ ಇರುವುದರಿಂದ ಅವರು ದೂರದ ಆಸ್ಪತ್ರೆಗಳಿಗೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಮಾಸ್ತಿ ಹೋಬಳಿಯಲ್ಲಿರತಕ್ಕ ಜನಗಳನ್ನು ಬಿಟ್ಟರೆ ಬೇರೆ ಕಡೆ ಇರತಕ್ಕ ಮಹಿಳೆಯರು ಬೇರೆ ಕಡೆಗೆ ವೈದ್ಯಕೀಯ ಸೌಕರ್ಯ ಪಡೆಯಲು ಹೋಗುವುದಿಲ್ಲ.

ಅಲ್ಲಿ ಮುಸ್ಲಿಂ ಜನಸಂಖ್ಯೆ ೩ ಸಾವಿರ ಇದೆ. ಕಳೆದ ೨-೩ ವರ್ಷಗಳಿಂದ ಅಲ್ಲಿಗೆ ಒಂದು ಪ್ರೈಮರಿ ಹೆಲ್ತ್ ಸೆಂಟರ್‌ನ್ನು ಕೇಳುತ್ತಿದ್ದರೂ ಸಹ ಇವೊತ್ತಿನವರೆಗೂ ಕೊಟ್ಟಿಲ್ಲ. ಈ ಸೆಂಟರ್‌ಗಳನ್ನು ಕೇವಲ ಪಟ್ಟಣಗಳಿಗೇ ಕೊಟ್ಟರೆ ಹಳ್ಳಿಯವರು ಏನು ಮಾಡಬೇಕು ? ಇನ್ನು ಮುಂದೆಯಾದರೂ ಜನರ ಆರೋಗ್ಯದ ದೃಷ್ಟಿಯಿಂದ ಹಳ್ಳಿಗಳ ಹಾಗೂ ಗ್ರಾಮಾಂತರ ಪ್ರದೇಶಗಳ ಕಡೆಗೆ ಹೆಚ್ಚಿನ ಗಮನ ಕೊಡಬೇಕೆಂದು ವಿನಯಪೂರ್ವಕವಾಗಿ ಮಾನ್ಯ ಆರೋಗ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಸಾರಿಗೆ ಮಂತ್ರಿಗಳು ಇಲ್ಲಿಯೇ ಇದ್ದಾರೆ. ಮಾನ್ಯ ಮಂತ್ರಿಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಕೆಲವೊಂದು ಸಲ ಕಂಡಕ್ಟರ್‌ಗಳು ಏನಾದರು ಮುಷ್ಕರ ಮಾಡಿದರೆ ಬಸ್‌ಗಳೇ ಇರುವುದಿಲ್ಲ. ರಂಜಾನ್, ಯುಗಾದಿ ಮುಂತಾದ ಹಬ್ಬಗಳು ಇರುವಾಗ ಜನರು ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗಬೇಕಾಗುತ್ತದೆ ಇಂತಹ ಸಂದರ್ಭಗಳಲ್ಲಿ ಯಾರೋ ಒಬ್ಬ ಕಂಡಕ್ಟರ್ ಹಣದ ದುರುಪಯೋಗ ಮಾಡಿದ ಎಂಬ ಕಾರಣದಿಂದ ಕೆಲಸದಿಂದ ತೆಗೆದುಹಾಕಿದರೆ ಎಲ್ಲರೂ ಸ್ಟ್ರೈಕ್ ಮಾಡುತ್ತಾರೆ. ಆಗ ಈಚೆಗೆ ಬಸ್‌ಗಳೇ ಬರದೆ ಪ್ರಯಾಣಿಕರಿಗೆ ತೊಂದರೆಯಾಗುತ್ತದೆ. ಒಂದು ದಿನ ಒಂದು ಬಸ್ ಓಡದಿದ್ದರೆ ಸಾರಿಗೆ ಸಂಸ್ಥೆಗೆ ೩೦೦ ರಿಂದ ೪೦೦ ರೂ.ಗಳವರೆಗೆ ನಷ್ಟವಾಗುತ್ತದೆ ಜೊತೆಗೆ ೫೦ ರಿಂದ ೬೦ ಜನ ಪ್ರಯಾಣಿಕರಿಗೆ ತೊಂದರೆಯಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಬಸ್‌ಗಾಗಿ ಕಾಯುತ್ತಿರುವವರ ಪರಿಸ್ಥಿತಿಯನ್ನು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಇನ್ನು ಮುಂದೆ ಜನರಿಗೆ ಈ ರೀತಿ ತೊಂದರೆಯಾಗುವುದನ್ನು ತಪ್ಪಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ವಿಶ್ವಬ್ಯಾಂಕ್ ಸಹಾಯದಿಂದ ಅನೇಕ ಮೈನರ್ ಇರಿಗೇಷನ್ ಕೆಲಸಗಳನ್ನು ಮಂಜೂರು ಮಾಡಿದ್ದರೂ ಸಹ ಅವು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಪಟ್ಟಿಯಲ್ಲಿ ಹೆಸರುಗಳು ಇವೆ. ಆದರೆ ಕಳೆದ ಒಂದು ವರ್ಷದಿಂದ ಕೆಲಸ ಮಾತ್ರ ಆಗಿಲ್ಲ. ಈ ಕೆಲಸಗಳನ್ನು ಜಾಗ್ರತೆ ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ ಮತ್ತು ನಾವೂ ಸಹ ಜನರಿಗೆ ಸರ್ಕಾರದವರು ಹೊಸ ಹೊಸ ಕೆರೆಗಳ ಕೆಲಸ ತೆಗೆದುಕೊಂಡಿದ್ದಾರೆಂದು ಹೇಳಬಹುದು. ಆದ್ದರಿಂದ ಇದರ ಕಡೆಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಇಂಟರ್‌ಸ್ಟೇಟ್ ಪರ್ಮಿಟ್‌ಗಳನ್ನು ಹೆಚ್ಚು ಕೊಡುವುದರ ಮೂಲಕ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಈಗ ಬೆಂಗಳೂರು ನಗರದಿಂದ ಹೊಸೂರು ಮತ್ತು ಕೃಷ್ಣಗಿರಿಗೆ ಹೋಗುವವರ ಸಂಖ್ಯೆ ಜಾಸ್ತಿಯಾಗಿದೆ. ಆದರೆ ಬಸ್‌ಗಳು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲ. ಹೊಸೂರು ನಮ್ಮ ರಾಜ್ಯಕ್ಕೆ ಸೇರಬೇಕೆಂದು ಹೋರಾಟ ಮಾಡುತ್ತಿದ್ದೇವೆ. ಆದರೆ ಅಲ್ಲಿಗೆ ಬಸ್‌ಗಳ ಸೌಲಭ್ಯ ಸಾಲದು. ನಮ್ಮಂತಹ ಎಂ.ಎಲ್.ಎ.ಗಳೇ ಸೀಟ್ ಸಿಗದೆ ನಿಂತು ಪ್ರಯಾಣ ಮಾಡಬೇಕಾಗಿದೆ. ಟಿಕೇಟ್ ಸಿಗುವುದೇ ಕಷ್ಟ. ಒಂದು ರೂಪಾಯಿ ಜಾಸ್ತಿ ಕೊಟ್ಟು ಪ್ರಯಾಣ ಮಾಡಬೇಕಾಗುತ್ತದೆ. ಈ ಕಷ್ಟವನ್ನು ತಪ್ಪಿಸಲು ಬೆಂಗಳೂರಿನಿಂದ ನಮ್ಮ ಸರ್ಕಾರದವರು ಅಲ್ಲಿಗೆ ಎರಡು ಬಸ್‌ಗಳನ್ನು ಮತ್ತು ಮದ್ರಾಸ್ ಸರ್ಕಾರದವರು ಅಲ್ಲಿಂದ ಇಲ್ಲಿಗೆ ಎರಡು ಬಸ್‌ಗಳನ್ನು ಓಡಿಸುವ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ನಾಲ್ಕನೇ ದರ್ಜೆ ನೌಕರರು ನಿವೃತ್ತರಾದ ಮೇಲೆ ಆ ಜಾಗಕ್ಕೆ ಹೊಸಬರನ್ನು ನೇಮಕ ಮಾಡದ ಕಾರಣ ಈಗ ಸುಮಾರು ೮೦೦ ಹುದ್ದೆಗಳು ಖಾಲಿ ಇವೆ. ಆದರೆ ಇವುಗಳನ್ನು ಭರ್ತಿ ಮಾಡಿಲ್ಲ ಹೊಸ ಪೋಸ್ಟ್‌ಗಳಾದರೆ ಆರ್ಥಿಕ ಕಾರಣದಿಂದ ಭರ್ತಿ ಮಾಡುವುದಕ್ಕಾಗುವುದಿಲ್ಲವೆಂದು ಕಾರಣ ಕೊಡಬಹುದು, ಆದರೆ ಇವು ಕ್ರಿಯೇಟೆಡ್ ಪೋಸ್ಟ್‌ಗಳಾದ ಕಾರಣ ಉದ್ಯೋಗ ವಿನಿಮಯ ಕೇಂದ್ರದಿಂದ ವಿವರಗಳನ್ನು ತರಿಸಿಕೊಂಡು ಏತಕ್ಕೆ ಭರ್ತಿ ಮಾಡಬಾರದು ? ಈ ವಿಚಾರವನ್ನು ಮಾನ್ಯ ಆರೋಗ್ಯ ಮಂತ್ರಿಗಳು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಈ ಖಾಲಿ ಇರುವ ೮೦೦ ಹುದ್ದೆಗಳನ್ನು ಭರ್ತಿ ಮಾಡಿಸಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಕೋಲಾರ ಹಿಂದುಳಿದ ಜಿಲ್ಲೆಯಾಗಿದೆ. ಈ ಜಿಲ್ಲೆಗೆ ಸೇರಿದ ಮಾಲೂರು ಮತ್ತು ಮುಳಬಾಗಲು ಬಹಳ ಹಿಂದುಳಿದ ತಾಲ್ಲೂಕ್‌ಗಳಾಗಿವೆ ಈ ಭಾಗದಲ್ಲಿ ೧೩೦೦ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿರುವುದರಿಂದ ಒಂದು ಫಸ್ಟ್ ಗ್ರೇಡ್ ಕಾಲೇಜನ್ನು ಮಂಜೂರು ಮಾಡಬೇಕೆಂದು ಮಾನ್ಯ ವಿದ್ಯಾ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ಸರ್ಕಾರದವರು ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕು. ಏಕೆಂದರೆ, ಇವರೇ ನಮಗೆ ಓಟು ಕೊಡುವವರು. ಗ್ರಾಮಾಂತರ ಪ್ರದೇಶಗಳಲ್ಲಿ ಬಡಬಗ್ಗರೇ ಜಾಸ್ತಿ ಇರುವುದರಿಂದ ಅವರುಗಳಿಗೆ ಹೆಚ್ಚಿನ ಆದ್ಯತೆ ಕೊಡದಿದ್ದರೆ ಹೇಗಾಗುತ್ತದೆ? ಈ ಭಾಗದಿಂದ ಬರುವ ವಿದ್ಯಾರ್ಥಿಗಳಿಗೆ ಮೆಡಿಕಲ್ ಕಾಲೇಜ್‌ಗಳಲ್ಲಿ ಹೆಚ್ಚಿನ ಸೀಟ್‌ಗಳನ್ನು ಕೊಡಬೇಕು. ಹಳ್ಳಿಗಳಲ್ಲಿ ಸರಿಯಾಗಿ ಉಪಾಧ್ಯಾಯರುಗಳಿರುವುದಿಲ್ಲ, ಸರಿಯಾದ ಕಟ್ಟಡಗಳಿರುವುದಿಲ್ಲ ಜೊತೆಗೆ ಬೇರೆ ಯಾವ ಅನುಕೂಲಗಳೂ ಇರುವುದಿಲ್ಲ. ಇಂತಹಪ್ರದೇಶಗಳಲ್ಲಿ ಓದಿದವರು ಮೆಡಿಕಲ್ ಸೀಟ್ ಪಡೆದುಕೊಳ್ಳಲು ಶೇಕಡಾ ೮೦ರಷ್ಟು ಅಂಕಗಳನ್ನು ತೆಗೆಯುವುದು ಕಷ್ಟವಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ರಿಯಾಯಿತಿ ತೋರಿಸುವುದರ ಮೂಲಕ ರೈತರ ಮಕ್ಕಳಿಗೆ ಹೆಚ್ಚು ಮೆಡಿಕಲ್ ಸೀಟ್‌ಗಳನ್ನು ಕೊಟ್ಟರೆ ಅವರು ನಮಗೆ ಕೃತಜ್ಞತೆ ಸಲ್ಲಿಸುತ್ತಾರೆ. ಇಂಜಿನಿಯರಿಂಗ್ ಕಾಲೇಜ್‌ನಲ್ಲಿಯೂ ಸಹ ಇದೇ ಪದ್ಧತಿಯನ್ನು ಅನುಸರಿಸಬೇಕೆಂದು ಹೇಳುತ್ತೇನೆ. ಮಾನ್ಯ ಮಂತ್ರಿಗಳೂ ಸಹ ಹಳ್ಳಿಯಿಂದಲೇ ಬಂದಿರುವುದರಿಂದ ಅಲ್ಲಿನ ಜನರ ಕಷ್ಟ ಏನೆಂಬುದು ಗೊತ್ತಿದೆ. ಆದ್ದರಿಂದ ರೈತರ ಮಕ್ಕಳಿಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯ ಕೂಡ ಸಾಕಷ್ಟು ಇಲ್ಲ. ಆದ್ದರಿಂದ ಪ್ರತಿ ತಾಲ್ಲೂಕ್‌ನಲ್ಲಿಯೂ ಒಂದೊಂದು ಟೆಕ್ನಿಕಲ್ ಸ್ಕೂಲ್‌ಗಳನ್ನು ತೆರೆದು ವಿದ್ಯಾರ್ಥಿಗಳಿಗೆ ವೈಂಡಿಂಗ್, ಫಿಟ್ಟಿಂಗ್ ಮುಂತಾದ ವಿಷಯಗಳಲ್ಲಿ ತರಬೇತಿ ಕೊಟ್ಟರೆ ಮುಂದೆ ಅವರುಗಳು ಸ್ವಂತವಾಗಿ ಉದ್ಯೋಗ ಮಾಡಲು ಅವಕಾಶವಾಗುತ್ತದೆ. ಈಗ ನಮ್ಮ ಸರ್ಕಾರದವರು ನಾನಾ ತರಹ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ಅದೇ ರೀತಿ ಈ ಕೆಲಸವನ್ನು ಸಹ ಮಾಡಿದರೆ ನಮ್ಮ ಸಮಾಜ ಹೆಚ್ಚಿನ ರೀತಿಯಿಂದ ಪ್ರಗತಿಯಾಗುತ್ತದೆಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ಈ ಸಲದ ಬಡ್ಜೆಟ್‌ನಲ್ಲಿ ಕೊರತೆಯು ಕಳೆದ ಸಲಕ್ಕಿಂತ ಕಡಿಮೆ ಇದೆ. ಇದು ಸಂತೋಷಪಡುವ ವಿಷಯ. ನಮ್ಮ ಆರ್ಥಿಕ ಮಂತ್ರಿಗಳು ಇನ್ನೂ ಹೆಚ್ಚಿನ ಉತ್ಸಾಹದಿಂದ ಕೆಲಸ ಮಾಡಿ ನಮ್ಮ ರಾಜ್ಯದಲ್ಲಿ ಸಾಮಾಜಿಕ ಪ್ರಗತಿಯ ಬಗ್ಗೆ ಇನ್ನೂ ಹೆಚ್ಚಿನ ಆದ್ಯತೆ ಕೊಟ್ಟು ನಮ್ಮ ರಾಜ್ಯವನ್ನು ಒಂದು ಮಾದರಿ ರಾಜ್ಯವನ್ನಾಗಿ ಮಾಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI D. DEVARAJ URS, (Hunsur).—Mr. Deputy Speaker, Sir, thank you very much for the opportunity given to me to speak on the budget. I wish the Minister for Finance was present here because what I am going to speak is based on certain facts and figures given to us through several of the reports and other documents. No doubt, his colleagues who are sitting, could also note down what I say but still it is better if the Finance Minister is here because he will be in a better position to understand and appreciate what I say May I request you kindly to see that he is called ಸ್ವಾಮಿ. ಈ ಸಾಲಿನ ಆಯ ವ್ಯಯ ಪಟ್ಟಿಯನ್ನು ಮಾನ್ಯ ಆರ್ಥಿಕ ಮಂತ್ರಿಗಳು ಮಂಡಿಸುವುದರ ಜೊತೆಗೆ ಇದಕ್ಕೆ ಸಂಬಂಧಪಟ್ಟ ಕೆಲವು ಮಾಹಿತಿಗಳನ್ನು ಸಹ ಒದಗಿಸಿದ್ದಾರೆ. ಇದರಲ್ಲಿ ಒಂದು ಪ್ರಮುಖವಾದಂಥ ಮಾಹಿತಿ ಒದಗಿಸುವ ಪುಸ್ತಕವೆಂದರೆ ಪ್ಲಾನಿಂಗ್ ಇಲಾಖೆಯವರು ಹೊರಡಿಸಿರುವಂತಹ ೧೯೮೧–೮೨ನೇ ಸಾಲಿಗೆ ಸೇರಿದ ಎಕನಾಮಿಕ್ ಸರ್ವೆ ವರದಿ. ಇತ್ತೀಚೆಗೆ ಪ್ರತಿವರ್ಷ ಬಡ್ಜೆಟ್ ಮಂಡಿಸುವಾಗ ಈ ಒಂದು ವರದಿಯನ್ನು ಒದಗಿಸುತ್ತಿರುವುದರ ಜೊತೆಗೆ ಪರ್‌ಫಾರ್ಮೆನ್ಸ್ ಬಡ್ಜೆಟ್‌ನ್ನು ಸಹ ಒದಗಿಸುವುದು ಒಂದು ಪದ್ಧತಿಯಾಗಿದೆ. ಇದನ್ನು ನಮ್ಮ ಕಾಲದಲ್ಲಿ ಜಾರಿಗೆ ತರಲಾಯಿತು. ಆಯಾ ವರ್ಷದಲ್ಲಿ ಮಂಡಿಸಲಾದ ಬಡ್ಜೆಟ್ ಪಾಸಾದ ಮೇಲೆ, ಯಾವ ಯಾವ ಬಾಬಿನಲ್ಲಿ ಎಷ್ಟೆಷ್ಟು ಕೆಲಸಗಳಾಗಿವೆ ಮತ್ತು ಎಷ್ಟೆಷ್ಟು ಹಣ ಖರ್ಚಾಗಿದೆ ಎಂಬುದನ್ನು ಪರ್‌ಫಾರ್ಮೆನ್ಸ್ ಬಡ್ಜೆಟ್‌ನಲ್ಲಿ ಹೇಳಲಾಗಿರುತ್ತದೆ. ನಿಮ್ಮ ಒಂದು ಗುರಿ ಈ

ಬಡ್ಜೆಟ್‌ನಲ್ಲಿರುತ್ತದೆ. ಆದರೆ ನಿಮ್ಮ ಸಾಧನೆ ಮತ್ತು ಕಾರ್ಯಕ್ರಮಗಳು ಏನಿವೆ ಅವು ಈ ಮಾನ್ಯ ಸಭೆಗೆ ಮತ್ತು ಸಾರ್ವಜನಿಕರಿಗೆ ಗೊತ್ತಾಗಬೇಕಾದರೆ ಈ ಪರ್‌ಫಾರ್ಮೆನ್ಸ್ ಬಡ್ಜೆಟ್ ಪುಸ್ತಕದಿಂದ ಮಾತ್ರ ಸಾಧ್ಯ.

ನನಗೆ ತಿಳಿದಹಾಗೆ ಹೋದ ವರ್ಷದ್ದು ಕೊಟ್ಟಿಲ್ಲಾ, ಈ ವರ್ಷದ್ದೂ ಕೊಟ್ಟಿಲ್ಲಾ. ನನಗೆ ತಿಳಿದ ಹಾಗೆ ಇವರು ಬಂದಮೇಲೆ ಅಂದರೆ ಈ ಸರ್ಕಾರ ಬಂದದ್ದು ೮೦ನೇ ಇಸವಿ ಜನವರಿಯಲ್ಲಿ ಇವರು ಬಂದಮೇಲೆ ಎರಡು ವರ್ಷದ್ದು ಬಡ್ಜೆಟ್ ಪರ್‌ಫಾರ್ಮೆನ್ಸ್ ಬಡ್ಜೆಟ್ ನಮ್ಮ ಮುಂದೆ ಇಲ್ಲ. ಅದು ನಮ್ಮ ಮುಂದೆ ಇಲ್ಲದೇ ಇರುವಾಗ ಇವರು ಸಾಧನೆ ಏನು ಮಾಡಿದ್ದಾರೆ ಅಂತ ಹೇಳುವುದನ್ನು, ನಮ್ಮ ಹಣಕಾಸಿನ ಮಂತ್ರಿಗಳು ಈ ಬಗ್ಗೆ ಅವರ ಬಡ್ಜೆಟ್ ಭಾಷಣದಲ್ಲಿ ಏನು ಓದಿದ್ದಾರೆ ಅದನ್ನು ನೋಡಿಕೊಂಡು ಅದೇ ಇರಬಹುದು ಎಂದು ನಾವು ಅಂದುಕೊಳ್ಳಬೇಕು. ಆದರಲ್ಲಿ ಎಷ್ಟರಮಟ್ಟಿಗೆ ಗುರಿಯನ್ನು ಸಾಧನೆ ಮಾಡಿದ್ದಾರೆ, ಎಷ್ಟರ ಮಟ್ಟಿಗೆ ಆ ಗುರಿಯನ್ನು ಸಾಧನೆ ಮಾಡುವುದಕ್ಕಾಗಲಿಲ್ಲಾ ಎನ್ನುವುದು ಆದರಲ್ಲಿ ಕಂಪಾರಿಟೀವ್ ಸ್ಟಡಿ ಮಾಡುವುದಕ್ಕೆ ಗೊತ್ತಾಗುವುದಿಲ್ಲ. ಹೀಗೆ ಗೊತ್ತಾಗದೇ ಇರುವಾಗ ಇವರು ಏನು ಉದ್ದೇಶಿಸಿದ್ದಾರೆ ಆ ಉದ್ದೇಶವೇನೋ ಹೇಳುವುದಕ್ಕೆ ಚೆನ್ನಾಗಿದೆ, ಯಾವ ಬಾಬಿನಲ್ಲಿ ತೆಗೆದುಕೊಂಡರೂ ಇವರು ಹೇಳಿರತಕ್ಕಂಥಾ ಉದ್ದೇಶ ಚೆನ್ನಾಗಿದೆ ಆದರೆ ಅದಕ್ಕೆ ತಕ್ಕಂತೆ ಕಾರ್ಯಗತ ಮಾಡಬೇಕು, ಸಾಧನೆ ಮಾಡಬೇಕು, ಹಾಗೆ ಮಾಡಿದ್ದಾರೆಯೋ ಸರ್ಕಾರ ನಡೆಸಿಕೊಂಡು ಹೋಗತಕ್ಕಂಥಾವರಿಗೆ ಇಂತಿಂಥಾದ್ದು ಹೆಚ್ಚು ಹೆಚ್ಚಾಗಿ ಸಾಧನೆ ಮಾಡಬೇಕೆನ್ನುವ ಉದ್ದೇಶ ಯಾರಿಗೆ ಇರುವುದಿಲ್ಲ, ನಾನು ಈ ಮಾತನ್ನು ದುರುದ್ದೇಶದಿಂದ ಹೇಳುತ್ತಾ ಇಲ್ಲ. ಉದ್ದೇಶವೇನೋ ಒಳ್ಳೆಯದು ಆದರೆ ಅದನ್ನು ಸಾಧನೆ ಮಾಡಿ ತೋರಿಸಿದಾಗ ಮಾತ್ರ ನಿಮ್ಮ ಉದ್ದೇಶ ಸಫಲವಾಗಿದೆಯೋ, ಸಾರ್ಥಕ ವಾಗಿದೆಯೋ ಎನ್ನುವುದನ್ನು ಸ್ಪಷ್ಟವಾಗಿ ಅರ್ಥವಾಗುತ್ತದೆ. ನಾನು ಮೊದಲೇ ಹೇಳಿದ ಹಾಗೆ ಎರಡು ವರ್ಷದ್ದು ಪರ್‌ಫಾರ್ಮೆನ್ಸ್ ಬಡ್ಜೆಟ್ ಅನ್ನು ನಮಗೆ ಇಲ್ಲಿಯವರೆಗೂ ಒದಗಿಸಿಲ್ಲಾ ಆದರೂ ನನಗೆ ತಿಳಿದಂತೆ ಈ ಬಗ್ಗೆ ಕೆಲವು ವಿಷಯಗಳನ್ನು ನಿಮ್ಮ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ನೀವೇನು ಗುರಿ ಸಾಧನೆ ಮಾಡಬೇಕು ಅಂತ ಹೊರಟಿದ್ದೀರೋ ಅದನ್ನು ಇನ್ನೂ ಸಾಧನೆ ಮಾಡುವು ದಕ್ಕೆ ನಿಮ್ಮಿಂದ ಸಾಧ್ಯವಾಗಿಲ್ಲ ಅನ್ನುವ ಮಾತನ್ನು ಹೇಳುತ್ತೇನೆ. ನಾನು ಎಲ್ಲಾ ಬಾಬತುಗಳ ಮೇಲೆ ಮಾತನಾಡುವುದಕ್ಕೆ ಹೋಗುವುದಿಲ್ಲ, ಏತಕ್ಕೆಂದರೆ ಹೆಚ್ಚು ಕಾಲಾವಕಾಶ ಇಲ್ಲದೇ ಇರುವುದರಿಂದ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ ಆದರಲ್ಲಿ ಮುಖ್ಯವಾದ ಎರಡು ವಿಷಯಗಳಿಗೆ ಸಂಬಂಧ ಪಟ್ಟ ಹಾಗೆ ಮಾತ್ರ ಮಾತನಾಡುತ್ತೇನೆ. ಮೊದಲನೆಯದಾಗಿ ಹೇಳುವುದು ಏನೆಂದರೆ ಇತ್ತೀಚೆಗೆ ೫ನೇ ಪ್ಲಾನ್ ಮತ್ತು ೬ನೇ ಪ್ಲಾನ್‌ನಲ್ಲಿ ಕೆಲವು ಇಂಪಾರ್ಟೆಂಟ್ ಸೆಕ್ಟರ್ಸ್ ಏನು ಇದೆ ಆದರ ಬಗ್ಗೆ ಹೇಳುತ್ತೇನೆ ಆ ಯೋಜನೆಯಲ್ಲಿ ಇರ್ರಿಗೇಷನ್ ಅಗ್ರಿಕಲ್‌ಚರ್ ಪವರ್ ಹೀಗೆಲ್ಲಾ ಇದೆ ಕೋರ್ ಸೆಕ್ಟರ್ಸ್ ಆಫ್‌ದಿ ಪ್ಲಾನ್‌ನಲ್ಲಿ ಎಲ್ಲದಕ್ಕೂ ಹೆಚ್ಚು ಮಹತ್ವ ಕೊಟ್ಟಿಲ್ಲ. ಕೇಂದ್ರ ಸರ್ಕಾರದವರು ಆದ ರಲ್ಲಿ ಹೆಚ್ಚು ಮಹತ್ವ ಕೊಟ್ಟಿರುವುದು ಯಾವುದಕ್ಕೆ ಎಂದರೆ ಪವರ್ ಮತ್ತು ಇರ್ರಿಗೇಷನ್‌ಗೆ ಇವೆರಡಕ್ಕೆ ಮಾತ್ರ ಬಹಳ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಅದೇರೀತಿಯಾಗಿ ಪ್ರತಿಯೊಂದು ರಾಜ್ಯದಲ್ಲೂ ಈ ಪವರ್ ಮತ್ತು ಇರಿಗೇಷನ್ ಸೆಕ್ಟರ್ಸ್‌ಗೆ ಆದ್ಯತೆಯನ್ನು ಕೊಟ್ಟಿದ್ದಾರೆ. ಈ ಬಗ್ಗೆ ನಮ್ಮ ರಾಜ್ಯ ಸರ್ಕಾರಕ್ಕೂ ಕೂಡ ನಾನು ಒಂದು ಸಲಹೆ ಮಾಡುತ್ತೇನೆ ಹಾಗೂ ಒತ್ತಾಯ ಮಾಡುತ್ತೇನೆ. ನಮ್ಮ ರಾಜ್ಯ ಸರ್ಕಾರದವರು ಈ ಬಗ್ಗೆ ಬೇರೆ ಬೇರೆ ರಾಜ್ಯ ಸರ್ಕಾರಗಳು ಯಾವರೀತಿ ಅನುಸರಿಸುತ್ತವೆಯೋ ಆದೇ ರೀತಿ ಅನುಸರಿಸುತ್ತಿದ್ದಾರೆಯೋ ಎಂದು ಕೇಳುತ್ತೇನೆ. ನಾನೂ ಸಹ ಇದಕ್ಕೆ ಸಂಬಂಧಪಟ್ಟ ಹಾಗೆ ನನಗೆ ತಿಳಿದಮಟ್ಟಿಗೆ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ ಕೆಲವು ವಿಷಯಗಳನ್ನು ಹೇಳಬಯಸು ತ್ತೇನೆ. ಈ ಸಂದರ್ಭದಲ್ಲಿ ತಮಗೆ ಒಂದು ವಿಷಯ ತಿಳಿಸುವುದಾದರೆ ಮಹಾರಾಷ್ಟ್ರ ಮತ್ತು ಗುಜ ರಾತ್‌ಗೆ ಸಂಬಂಧಪಟ್ಟ ಹಾಗೆ ನರ್ಮದಾ ಸ್ಕೀಂ ಒಂದನ್ನು ತೆಗೆದುಕೊಂಡಿದ್ದಾರೆ. ಅದು ಒಂದು ದೊಡ್ಡ ಸ್ಕೀಂ, ಈಗ ಅವರು ಈ ಸ್ಕೀಂ ಅನ್ನು ಶುರು ಮಾಡಿದ್ದಾರೆ. ಒಂದಲ್ಲ, ಎರಡಲ್ಲ, ನಾಲ್ಕು ಅಲ್ಲ ಐದಲ್ಲ, ೧೦–೧೨ ಸ್ಕೀಂ ಈ ತರಹ ತೆಗೆದುಕೊಂಡಿದ್ದಾರೆ. ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿರ ತಕ್ಕಂಥಾ ಮೇಜರ್ ಮತ್ತು ಮೀಡಿಯಂ ಇರ್ರಿಗೇಷನ್ ತೆಗೆದುಕೊಂಡರೆ ಇಲ್ಲಿ ಒಟ್ಟು ೪೮ ಸ್ಕೀಂಗಳು ಇವೆ. ನಾನು ಈಗ ಮೈನರ್ ಇರಿಗೇಷನ್ ವಿಚಾರವಾಗಿ ಮಾತನಾಡುವುದಿಲ್ಲ. ಇದರಲ್ಲಿ ಉತ್ತರ ಭಾಗದಲ್ಲಿ ಇರತಕ್ಕಂಥಾದ್ದು ಎಷ್ಟು. ದಕ್ಷಿಣ ಭಾಗದಲ್ಲಿ ಇರತಕ್ಕಂಥಾದ್ದು ಎಷ್ಟು ಇದೆ, ಅನ್ನುವುದನ್ನು ತೆಗೆದುಕೊಂಡರೆ ಉತ್ತರದ ಭಾಗದಲ್ಲಿ ಇರುವುದೇ ಹೆಚ್ಚು. ನಮ್ಮ ರಾಜ್ಯದಲ್ಲಿ ಬಹಳ ಮುಖ್ಯವಾ ದುದು ಎಂದರೆ ಎರಡು ಬೇಸನ್ಸ್ ಇವೆ, ಅವು ಯಾವುವೆಂದರೆ ಕಾವೇರಿ ಮತ್ತು ಕೃಷ್ಣಾ ಬೇಸಿನ್ಸ್.

ಒಟ್ಟು ೪೮ ಸ್ಕೀಂಗಳಲ್ಲಿ ಮೇಜರ್ ಮತ್ತು ಮೀಡಿಯಂ ಇರ್ರಿಗೇಷನ್‌ಗೆ ಸೇರಿದ ಹಾಗೆ ಕಾವೇರಿ ಬೇಸಿನ್‌ನಲ್ಲಿ ೧೫ ಸ್ಕೀಂಗಳು ಇವೆ, ಇನ್ನುಳಿದ ೩೩ ಸ್ಕೀಂಗಳು ಕೃಷ್ಣ ಬೇಸಿನ್‌ಗೆ ಸೇರಿಕೊಂಡಿದೆ. ಇದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇರಬಹುದು. ಆದರೂ ನನಗೆ ತಿಳಿದಿರತಕ್ಕಂಥಾ ವಿಚಾರ ಹೇಳಿದ್ದೇನೆ. ಕೃಷ್ಣಾ ಬೇಸಿನ್‌ಗೆ ತುಂಗಭದ್ರಾ, ಭದ್ರಾ, ಮಲಪ್ರಭಾ, ಘಟಪ್ರಭಾ ಹೀಗೆ ನಾನಾ ನದಿಗಳು ಇಲ್ಲಿ ಕೂಡಿರುವುದರಿಂದ ಕಾವೇರಿ ಬೇಸಿನ್‌ಗಿಂತಲೂ ಹೆಚ್ಚು ಸ್ಕೀಂಗಳನ್ನು ಅಲ್ಲಿ ತೆಗೆದುಕೊಳ್ಳಲು ಅವಕಾಶ ಇದೆ. ಅಲ್ಲದೆ , ಆಯಕಟ್ಟನ್ನು ಹೆಚ್ಚು ಡೆವಲಪ್ ಮಾಡಲು ಅವಕಾಶವಿದೆ ದುರದೃಷ್ಟವಶಾತ್ ನಮ್ಮ ಕೃಷ್ಣಾ ಬೇಸಿನ್ ನದಿಗಳ ವಾದ ವಿವಾದ ಏನು ಇದೆ ಅದು ಕೂಡ ತೀರ್ಮಾನವಾಗಿದೆ. ಈ ಎಲ್ಲಾ ಕಾರಣಗಳಿಂದ ಅಲ್ಲಿ ಹೆಚ್ಚು ಹೆಚ್ಚು ಕೆಲಸ ಮಾಡುವುದಕ್ಕೆ ಅನುಕೂಲವಾದೀತು ಎನ್ನುವ ಆಶೆಯಿಂದ ಅಲ್ಲಿ ೩೩ ಸ್ಕೀಂಗಳನ್ನು ತೆಗೆದುಕೊಂಡಿದ್ದೇವೆ. ಇಲ್ಲಿ ಅಂದರೆ ಈ ಕಾವೇರಿ ಬೇಸಿನ್‌ಗೆ ಸಂಬಂಧಪಟ್ಟ ಹಾಗೆ ೧೫ ಸ್ಕೀಂಗಳನ್ನು ಮಾತ್ರ ತೆಗೆದುಕೊಂಡೆವು. ಈ ೪೮ ಸ್ಕೀಂಗಳನ್ನು ತೆಗೆದುಕೊಳ್ಳುವುದಕ್ಕೆ ಅಲ್ಲಿ ಪ್ರಕೃತಿ ಏನು ಇದೆ ಅನ್ನುವುದರ ಬಗ್ಗೆ ನಾವು ಗಮನಿಸಬೇಕಾದ್ದು ಇದೆ. ಅಲ್ಲಿ ಪ್ರಕೃತಿ ಏನು ಇದೆ ಎಂದರೆ ಅದನ್ನು ವಿವರವಾಗಿ ಹೇಳುವುದಕ್ಕೆ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲಿಗೆ ಬಂದರೆ ಒಳ್ಳೆಯದು ಎಂದು ನನಗೆ ಅನಿಸುತ್ತದೆ.

ಶ್ರೀ ವೈ. ರಾಮಕೃಷ್ಣ.—ಹೇಳಿಕಳುಹಿಸಿದೇ ಬರುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ಈ ಎಕನಾಮಿಕ್ ಸರ್ವೆ ಜೊತೆಗೆ ಇನ್ನೊಂದು ಪುಸ್ತಕ ಇದೆ. ಅದು ಇರ್ರಿಗೇಷನ್ ಪ್ರಾಜೆಕ್ಟ್ಸ್‌ಗೆ ಸಂಬಂಧಪಟ್ಟದ್ದು. ಮೇಜರ್ ಅಂಡ್ ಮೀಡಿಯಮ್ ಪ್ರಾಜೆಕ್ಟ್ಸ್ ಇನ ಕರ್ನಾಟಕ ಅನ್ನುವಂಥಾದ್ದು ಇಲ್ಲಿಯವರೆಗೆ ಒದಗಿಸಿರತಕ್ಕಂಥಾದ್ದು ೧೯೮೦ನೇ ಇಸವಿದು ಮಾತ್ರ. ನನಗೆ ತಿಳಿದ ಮಟ್ಟಿಗೆ ೧೯೮೧ನೇ ಇಸವಿದು ಎಲ್ಲಾ ಮಾನ್ಯ ಸದಸ್ಯರಿಗೂ ಒದಗಿಸಿದಹಾಗೆ ಕಾಣಲಿಲ್ಲಾ. ೧೯೮೧ನೇ ಇಸವಿದೂ ಅಚ್ಚಾಗಿರಬೇಕು, ಅದನ್ನು ಎಲ್ಲಾ ಮಾನ್ಯ ಸದಸ್ಯರಿಗೂ ಒದಗಿಸಿದ್ದಾರೋ ಇಲ್ಲವೋ ಸರಿಯಾಗಿ ಗೊತ್ತಿಲ್ಲ. ಒಂದುವೇಳೆ ಅದನ್ನು ಒದಗಿಸದೇ ಹೋಗಿದ್ದರೆ ದಯಮಾಡಿ ಒದಗಿಸಿ. ನಾನು ಸರ್ಕಾರಕ್ಕೆ ಕಾಗದ ಬರೆದು ಇದರ ಬಗ್ಗೆ ಒಂದು ಕಾಪಿಯನ್ನು ತರಿಸಿಕೊಂಡಿದ್ದೇನೆ. ೧೯೮೧ ನೇ ಇಸವಿಗೆ ಸಂಬಂಧಪಟ್ಟ ಹಾಗೆ ಆ ಪುಸ್ತಕವನ್ನು ಎಲ್ಲರಿಗೂ ಒದಗಿಸಿಕೊಟ್ಟರೆ ನಾನು ಹೇಳತಕ್ಕಂಥಾ ವಿಚಾರವೂ ಸಹ ಎಲ್ಲರಿಗೂ ಚೆನ್ನಾಗಿ ಗೊತ್ತಾಗುತ್ತದೆ ಎಂದು ನನ್ನ ಭಾವನೆ. ಈ ಇರ್ರಿಗೇಷನ್ ಏನು ಸಾಧನೆಯಾಗಿದೆ ಅನ್ನುವುದರ ಬಗ್ಗೆ ನಾನು ೨ ೩ ವಿಷಯಗಳನು ಹೇಳಬೇಕಾದ್ದು ಇದೆ. ಈಗ ತಮ್ಮ ಮುಂದೆ ಹೇಳತಕ್ಕಂಥಾ ವಿಚಾರ ಏನು ಇದೆ ಅದನ್ನು ಸಮರ್ಥನೆ ಮಾಡುವುದಕ್ಕೆ ಆ ಪುಸ್ತಕವನ್ನು ಎಲ್ಲರಿಗೂ ಒದಗಿಸಿದರೆ ಒಳ್ಳೆಯದು. ನಾನು ಅದರ ಬಗ್ಗೆ ಸಮರ್ಥನೆ ಮಾಡುವುದರಲ್ಲಿ ಎಷ್ಟರ ಮಟ್ಟಿಗೆ ಸಾಧನೆಯಾಗಿದೆ ಅನ್ನುವುದನ್ನು ಈ ಮಾನ್ಯ ಸಭೆ ಹಾಗೂ ಸರ್ಕಾರ ಬಹಳ ತೀವ್ರವಾಗಿ ಗಮನಿಸುತ್ತದೆ ಎಂದು ತಿಳಿಯುತ್ತೇನೆ. ಇದುವರೆಗೂ ಮಾನ್ಯ ಹಣಕಾಸಿನ ಮಂತ್ರಿಗಳು ಬಂದಿಲ್ಲ. ಆದುದರಿಂದ ಈ ವಿಷಯವನ್ನು ಅವರು ಬಂದ ಮೇಲೆ ಹೇಳುವುದಕ್ಕೆ ರಿಸರ್ವ್ ಮಾಡುತ್ತೇನೆ. ಈ ವಿಷಯವನ್ನು ತಾವು ಯಾರೂ ಸಹ ಫಾಲೋ ಮಾಡುವುದಕ್ಕಾಗುವುದಿಲ್ಲ, ಆದುದರಿಂದ ಅವರೇ ಬರಲಿ ಎಂದು ಹೇಳುತ್ತೇನೆ. Because you are not directly concerned with this. It is somewhat difficult, I am not casting aspersions on anybody. Let me not be understood in that way. Why I am telling is this because the Finance Minister has to deal with finance and other allocations to various projects and he will be in a position to understand what I want to convey through you to this House and to the Government. Otherwise what all I say I am afraid will not be of much impact. That is why I request that the Hon'ble Finance Minister should be present here. ಈಗ ಇರ್ರಿಗೇಷನ್ ಪ್ರಾಜೆಕ್ಟ್ ವಿಷಯವನ್ನು ಅವರು ಬಂದ ಮೇಲೆ ತೆಗೆದುಕೊಳ್ಳೋಣ.

ಶ್ರೀ ವೈ. ರಾಮಕೃಷ್ಣ.—ಅವರು ಬರುತ್ತಾರೆ, ಹೇಳಿ.

ಶ್ರೀ ಡಿ. ದೇವರಾಜ ಅರಸ್.—ಅವರು ಬರಲಿಲ್ಲ, ಆಮೇಲೆ ತೆಗೆದುಕೊಳ್ಳೋಣ. ಏತಕ್ಕೆಂದರೆ ಇದು ಬಹಳ ಮುಖ್ಯವಾದುದು ಆದರಿಂದ ಹೇಳುತ್ತಿದ್ದೇನೆ. ಏತನ್ಮಧ್ಯೆ ವ್ಯವಸಾಯಕ್ಕೆ ಸಂಬಂಧಪಟ್ಟ ಹಾಗೆ ಕೆಲವು ವಿಷಯಗಳನ್ನು ಹೇಳುತ್ತೇನೆ. ವ್ಯವಸಾಯಕ್ಕೆ ಸಂಬಂಧಪಟ್ಟ ಹಾಗೆ ರೈತರ ಪ್ರಾಬ್ಲೆಮ್ಸ್ ಏನು ಇದೆ ಆದರ ಬಗ್ಗೆ ತಮ್ಮ ಗಮನವನ್ನು ಸೆಳೆಯುತ್ತೇನೆ. ಎದುರು ಪಕ್ಷದಲ್ಲಿರತಕ್ಕಂಥಾ ಮಾನ್ಯ ಸದಸ್ಯರುಗಳು ಆ ವಿಚಾರದಲ್ಲಿ ಈಗಾಗಲೇ ಹೇಳಿದ್ದಾರೆ. ಇದು ಮತ್ತೊಮ್ಮೆ ಪುನರಾವೃತ್ತಿಯಾದರೂ ಕೂಡ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಹಿಂದೆ ಸರ್ಕಾರದವರು ರೈತರಿಗೆ ೮೩ ಅಥವಾ ೮೬ ಕೋಟಿ ರೂಪಾಯಿಗಳನ್ನು ರಿಯಾಯಿತಿಯನ್ನು ಕೊಟ್ಟಿದ್ದೇವೆ ಎಂದು ಹೇಳಿದರು. ಮೊನ್ನೆ ತಾನೆ ಮಾನ್ಯ ಸದಸ್ಯರೊಬ್ಬರು ಶ್ರೀಮಾನ್ ಜೆ. ಹೆಚ್. ಪಟೇಲರು ಇದರ ಬಗ್ಗೆ ಒಂದು ಪ್ರಶ್ನೆ ಹಾಕಿದರು. ಅದೇನೆಂದರೆ ಎಷ್ಟು ಅರ್ಜಿಗಳು ಬಂದಿದ್ದವು ಸರ್ಕಾರದ ಸಾಲಕ್ಕಾಗಲಿ ಅಥವಾ ಕೋ ಆಪರೇಟೀವ್ ಸೊಸೈಟಿಯ ಸಾಲಕ್ಕಾಗಲಿ ರಿಯಾಯಿತಿ ಬಗ್ಗೆ ಸಣ್ಣ ಮತ್ತು ಅತಿ ಸಣ್ಣ ರೈತರಿಂದ ಎಷ್ಟು ಅರ್ಜಿಗಳು ಬಂದಿದ್ದವು ಎನ್ನುವ ಪ್ರಶ್ನೆಯನ್ನು ಹಾಕಿದ್ದರು. ಅದಕ್ಕೆ ಉತ್ತರವಾಗಿ ಮಾನ್ಯ ಮಂತ್ರಿಗಳು ಸುಮಾರು ೫ ಲಕ್ಷ ಚಿಲ್ಲರೆ ಅರ್ಜಿಗಳು ಬಂದಿದ್ದವು ಅದರಲ್ಲಿ ೧೨ ಸಾವಿರ ಚಿಲ್ಲರೆ ಅರ್ಜಿಗಳನ್ನು ಗಮನಕ್ಕೆ ತೆಗೆದುಕೊಂಡು ಸುಮಾರು ೭೫–೭೬ ಲಕ್ಷ ರೂಪಾಯಿಗಳಷ್ಟು ಸಾಲವನ್ನು ಬಿಟ್ಟುಬಿಟ್ಟಿದ್ದೇವೆ ಎಂದು ಹೇಳಿದರು.

೧೨–೩೦ ಪಿ. ಎಂ.

ಆದ್ದರಿಂದ ೭೫ ಲಕ್ಷ ಅಥವಾ ೭೬ ಲಕ್ಷ ರೂಪಾಯಿಗಳಷ್ಟು ಸಾಲವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಸ್ವಾಮಿ, ನಾನು ಹೇಳುವ ಮಾತು ಸರಿಯಲ್ಲ ಎಂದು ಹೇಳುವುದಾದರೆ ಅವರು ಸಂಬಂಧಪಟ್ಟ ಸರ್ಕಾರಿ ಆರ್ಡರನ್ನು ನಮ್ಮ ಮುಂದೆ ಇಡಲಿ. ಮೊದಲು ಸರ್ಕಾರ ಏನು ಆರ್ಡರ್ ಮಾಡಿತು, ಆಮೇಲೆ ಸರ್ಕಾರ ಏನು ಆರ್ಡರ್ ಮಾಡಿದೆ, ಅದೇ ಕೆಲವು ತಿಂಗಳುಗಳಲ್ಲಿ ಬದಲಾವಣೆ ಆದಮೇಲೆ ಹಾಗೆ ಬದಲಾವಣೆ ಮಾಡಿದಂಥ ಆರ್ಡರ್ ಏನಿದೆ ಇದನ್ನೆಲ್ಲಾ ಮುಂದೆ ಇಟ್ಟುಕೊಂಡರೆ ನಾವು ಹೇಳುವುದೆಲ್ಲಾ ಸ್ಪಷ್ಟವಾಗಿ ಅರ್ಥವಾಗುತ್ತದೆ. ಹಾಗಿಲ್ಲದೇಹೋದರೆ ಸುಮ್ಮನೆ ಹೇಳುತ್ತಾರೆ ಎನ್ನುವುದಾದರೆ ನಿಮ್ಮ ಆರ್ಡರ್ ತೆಗೆದು ಓದಿ. ಮೊದಲು ಸರ್ಕಾರದವರು ಏನು ಮಾಡಿದರು ? ಎಲ್ಲಾ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸರ್ಕಾರೀ ಸಾಲವಾಗಲೀ, ಕೋ–ಆಪರೇಟಿವ್ ಸಾಲವಾಗಲೀ ಬಿಟ್ಟುಬಿಡುತ್ತೇವೆ ಎಂದು ಹೇಳಿದ್ದು ಉಂಟೋ ಇಲ್ಲವೋ ? ಸರ್ಕಾರದವರು ಹಾಗೆ ಹೇಳಿದ್ದು ಉಂಟು, ಅದು ನಮಗೆ ಸ್ಪಷ್ಟವಾಗಿ ಗೊತ್ತಿದೆ. ಈ ಬಗ್ಗೆ ಎಲ್ಲಾ ಕಡೆಗೂ ಸರ್ಕುಲರ್ ಕಳಿಸಿದರು. ಎಲ್ಲಾ ತಾಲ್ಲೂಕುಗಳಿಗೆ ಡೆಪ್ಯುಟಿ ಕಮಿಷನರ್‌ರಿಂದ ಸರ್ಕುಲರ್ ಹೋಯಿತು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಮಾರ್ಜಿನಲ್ ಫಾರ್ಮರ್ಸ್, ಬಿಗ್ ಫಾರ್ಮರ್ಸ್ ಮತ್ತು ಸ್ಮಾಲ್ ಫಾರ್ಮರ್ಸ್‌ನಿಂದ ನಿಮ್ಮ ಸಾಲವನ್ನು ಬಿಟ್ಟುಬಿಡುತ್ತೇವೆ ಎಂಡು ಹೇಳಿ ಅವರಿಂದ ಸ್ವಲ್ಪ ಹಣವನ್ನು ವಸೂಲು ಮಾಡಿ ಯಾರುತಾನೇ ಅದರಲ್ಲಿ ಪಾಲು ಹಂಚಿಕೊಳ್ಳುವುದಿಲ್ಲ, ಎಲ್ಲಾ ತಾಲ್ಲೂಕುಗಳಲ್ಲಿ ಒಂದೊಂದು ಮನೆಯಲ್ಲಿ ೪ ಜನರನ್ನು ಪತ್ತೆ ಮಾಡಿಬಿಟ್ಟು ಅವರಿಂದ ಹಣ ತೆಗೆದುಕೊಂಡು ಅದನ್ನು ಹಂಚಿಕೊಂಡರು ಒಬ್ಬನಿಗೆ ೩೦ ಎಕರೆ ಇದ್ದರೆ ಅವನು ಸ್ಮಾಲ್ ಫಾರ್ಮರ್ ಆಗುವುದಿಲ್ಲ. ಐದ್ಯೆದು ಎಕರೆ ಇದ್ದರೆ ಅವರು ಸ್ಮಾಲ್ ಫಾರ್ಮರ್ಸ್ ಆಗುತ್ತಾರೆ. ಅಂತಹ ಐದ್ಯೆದು ಜನಕ್ಕೆ ಅವರಿಗೆ ಬೇಕಾದವರಿಗೆ ಯಾವುದೋ ಒಂದು ರೀತಿಯಲ್ಲಿ ಹಂಚಿಬಿಡುವುದು ಈ ರೀತಿ ಮಾಡಿದರು. ಈ ರೀತಿ ಮಾಡಬೇಕಾದರೆ ಸರ್ಕಾರ ಸುಮ್ಮ ಸುಮ್ಮನೆ ಮಾಡುವುದಿಲ್ಲ. ವಿಲೇಜ್ ಅಕೌಂಟೆಂಟ್‌ನಿಂದ ಹಿಡಿದು ತಹಶೀಲ್ದಾರ್‌ವರೆಗೆ ಎಲ್ಲಾ ಹಂತಗಳಲ್ಲೂ ಅದು ಹೋಗಬೇಕಲ್ಲ ಅದಕ್ಕೆ ದುಡ್ಡು ಖರ್ಚಾಗದೇ ಸಾಧ್ಯವಿಲ್ಲ. ಕೊನೆಗೆ ಈ ಬಗ್ಗೆ ಅರ್ಜಿ ಕೊಡುವುದಕ್ಕೆ ಒಂದು ಫಾರಂನ್ನು ನಿಗಧಿಗೊಳಿಸಿ, ಒಂದೊಂದು ಫಾರಂಗೆ ೨೫–೩೦ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಈ ಮಾನ್ಯ ಸಭೆಯಲ್ಲಿ ಆ ಪಕ್ಷದವರು ಈ ಪಕ್ಷದವರು ಎಂದು ಹೇಳುವುದು ಬೇಡ, ಆ ಕಡೆ ಕುಳಿತಿರುವವರನ್ನೇ ಕೇಳಿ, ಅವರು ಹಾಗಲ್ಲ, ಅವರು ಹೇಳುತ್ತಾ ಇರುವುದು ತಪ್ಪು," ಎಂದು ಧೈರ್ಯವಾಗಿ ಹೇಳಿಬಿಡಲಿ, ಆಗ ನಾನು ಒಪ್ಪಿಕೊಳ್ಳುತ್ತೇನೆ, ಈ ರೀತಿ ಒಂದು ತಾಲ್ಲೂಕಿನಲ್ಲಿ ಆಗಿದೆ ಎಂದು ನಾನು ಹೇಳುತ್ತಾ ಇಲ್ಲ. ಇದು ಎಲ್ಲಾ ತಾಲ್ಲೂಕುಗಳಲ್ಲಿಯೂ ಆಗಿದೆ. ಪ್ರತಿಯೊಂದು ತಾಲ್ಲೂಕುಗಳಲ್ಲಿಯೂ ಒಬ್ಬೊಬ್ಬರೂ ಈ ರೀತಿ ೨೦೦–೩೦೦ ರೂಪಾಯಿಗಳವರೆಗೆ ಖರ್ಚು ಮಾಡಿರುವವರು ಇದ್ದಾರೆ, ಎಂತಹ ಗರೀಬನಾದರೂ ಕೂಡ ೧೦೦–೧೫೦ ರೂಪಾಯಿಗಳಿಗೆ ಕಡಿಮೆ ಏನೂ ಖರ್ಚು ಮಾಡಿಲ್ಲ. ಅವರಿಗೆ ಆಗಿರತಕ್ಕಂಥ ಖರ್ಚು ಎಂದರೆ ಲಂಚದ ರೂಪದಲ್ಲಿ ಆ ಹಣವನ್ನು

ಕೊಟ್ಟಿದ್ದಾರೆ. ವಿಲೇಜ್ ಅಕೌಂಟೆಂಟ್‌ನಿಂದ ಹಿಡಿದು ತಹಶೀಲ್ದಾರ್‌ವರೆಗೆ ಯಾರ್ಯಾರಿಗೆ ಲಂಚ ಕೊಡಬೇಕೋ ಅವರಿಗೆಲ್ಲಾ ಲಂಚ ಕೊಟ್ಟುಕೊಂಡು ಬರಬೇಕು, ಅದನ್ನು ಅವರು ಕೊಟ್ಟಿದ್ದಾರೆ. ಅವರೇಜ್ ಒಂದು ಅರ್ಜಿಗೆ ೧೫೦ ರೂಪಾಯಿಗಳಂತೆ ಲೆಕ್ಕ ತೆಗೆದುಕೊಂಡರೆ ೫ ಲಕ್ಷ ಚಿಲ್ಲರೆ ಅರ್ಜಿಗಳಿಗೆ ಸುಮಾರು ೭½ ಅಥವಾ ೮ ಕೋಟಿ ರೂಪಾಯಿಗಳಾಗುತ್ತದೆ, ಈ ೭೫ ಲಕ್ಷ ರೂಪಾಯಿಗಳ ಸಾಲ ವನ್ನು ಬಿಡಿಸಿಕೊಳ್ಳುವುದಕ್ಕೆ ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಸಣ್ಣ ರೈತರು ಮತ್ತು ಅತಿ ಸಣ್ಣ ರೈತರು ಮತ್ತು ದೊಡ್ಡ ರೈತರು ಸಣ್ಣ ರೈತರಾಗಿ ಸರ್ಕಾರದವರು ನಮ್ಮ ಸಾಲವನ್ನು ಬಿಟ್ಟುಬಿಡು ತ್ತಾರೆ' ಅಂತ ಹೇಳಿ ಹುಚ್ಚಿದ್ದು ಕುಣಿದುಬಿಟ್ಟರು. ಈ ಬಗ್ಗೆ ಅವರೆಲ್ಲಾ ಅರ್ಜಿ ಕೊಡುವುದಕ್ಕೆ ಸುಮಾರು ೭-೮ ಕೋಟಿ ರೂಪಾಯಿಗಳಷ್ಟು ಲಂಚ ಕೊಟ್ಟರು. ಆ ಅಧಿಕಾರಿಗಳಿಗೆ ದೀವಳಿಗೆ ಹಬ್ಬ ಷುರುವಾಯಿತು, ಯಾವುದೋ ಒಂದು ಒಳ್ಳೆಯ ಟೈಮ್ ಇತ್ತು ಅಂತ ಕಾಣುತ್ತದೆ. ಆ ಟೈಮ್ ನಲ್ಲಿ ಅವರೆಲ್ಲಾ ಅದನ್ನು ಹಂಚಿಕೊಂಡು 'ಸಂತೋಷವಾಗಿ ದೀಪಾವಳಿ ಹಬ್ಬ ಮಾಡಿದರು, ರೈತರು ಏನು ತಿಳಿದುಕೊಂಡರು ಎಂದರೆ, ನಮಗೆ ಹೇಗೋ ಸಿಕ್ಕಿತಲ್ಲಪ್ಪ ಅಷ್ಟೇ ಸಾಕು, ಅದು ಹೋದರೂ ಹೋಗಲಿ' ಅಂತ ತಿಳಿದುಕೊಂಡರು. ಅದೆಲ್ಲಾ ೧೦ ಜನಕ್ಕೆ ಹಂಚಿಕೆಯಾಗಿಬಿಟ್ಟರೆ ಒಬ್ಬನಿಗೆ ತಲೆ ಹೊರೆ ಕಡಿಮೆ ಯಾಗುತ್ತೆ ಅಂತ ಒಂದು ಮಾತು ಇದೆ. ಆ ರೀತಿ ೫ ಲಕ್ಷ ಅಥವಾ ೬ ಲಕ್ಷ ರೈತರೆಲ್ಲಾ ಸೇರಿ ಸುಮಾರು ೭½ ಅಥವಾ ೮ ಕೋಟಿ ರೂಪಾಯಿಗಳಷ್ಟು ಕೊಟ್ಟರು ಇದು ರೈತರಿಗೆ ಅರ್ಥವಾಗಲಿಲ್ಲ. 'ನನ್ನ ಒಬ್ಬನಿಗೆ ೧೫೦-೨೦೦ ರೂಪಾಯಿ ಹೋಗುತ್ತೆ ಅಷ್ಟೇ ತಾನೇ, ಮುಂದೆ ಸಾವಿರ ರೂಪಾಯಿ ಆದಾಯ ಬರುತ್ತದೆ' ಅಂತ ಅವರು ತಿಳಿದುಕೊಂಡರು. ನಮ್ಮ ಸರ್ಕಾರದವರಿಗೆ ಏನು ಆಯಿತು ? ಇದೆಲ್ಲಾ ನೋಡಿಬಿಟ್ಟು ಇವರಿಗೆ ಗಾಬರಿಯಾಯಿತು ! ನಮ್ಮ ಮಾನ್ಯ ಮುಖ್ಯಮಂತ್ರಿಯವರಲ್ಲಿ ಒಂದು ಗುಣ ಇದೆ. ಇವರು ಆಧುನಿಕ ದೂರ್ವಾಸ ಮುನಿಗಳು.

ಒಬ್ಬ ಮಾನ್ಯ ಸದಸ್ಯರು.—ಅಲ್ಲ, ಅವರು ಕರ್ಣನ ಹಾಗೆ.

ಶ್ರೀ ಡಿ. ದೇವರಾಜ ಅರಸ್.—ಇವರು ಕರ್ಣ ಎಲ್ಲಿ ಆಗುತ್ತಾರೆ ? ಸುಮ್ಮನೆ ಇರಿ ನೀವು. ನಾನು ಹೇಳುತ್ತೇನೆ ಕೇಳಿ. ನಾನು ಹೇಳುವುದರಲ್ಲಿ ಅರ್ಥ ಇದೆ ಆ ದೂರ್ವಾಸ ಮುನಿಗಳು ಕೊಟ್ಟರೆ ವರ, ಇಟ್ಟರೆ ಶಾಪ, ಆ ದೂರ್ವಾಸ ಮುನಿಗಳು ತ್ರೇತಾಯುಗದಿಂದ ದ್ವಾಪರ ಯುಗದ ವರೆಗೆ ಇದ್ದರು ಎಂದು ಹೇಳುತ್ತಾರೆ. ಅವರಿಗೆ ಸಿಟ್ಟು ಬಂದರೆ ಶಪಿಸುತ್ತಿದ್ದರು. ಅವರು ಸುಪ್ರೀತ ರಾಗಿದ್ದರೆ ಏನು ಬೇಕಾದರೂ ವರ ಕೊಟ್ಟುಬಿಡುತ್ತಿದ್ದರು. ಅವರಿಗೆ ಸಿಟ್ಟು ಬಂದರೆ ತಡೆದು ಕೊಳ್ಳುವುದಕ್ಕಾಗುತ್ತಿರಲಿಲ್ಲ. 'ದೂರ್ವಾಸ ಮುನಿಗಳ ಕೋಪ' ಇದ್ದಹಾಗೆ ಇದೆ ಅಂತ ನಾವು ಈಗಲೂ ತಮಾಷೆಗಾಗಿ ಆಗಾಗ ಹೇಳುತ್ತಾ ಇರುತ್ತೇವೆ. ಆದರೆ ಇವರು ಆಧುನಿಕ ದೂರ್ವಾಸ ಮುನಿಗಳು ಅಂತ ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಇವರು ಕೊಟ್ಟ ಶಾಪಕ್ಕೆ ಮತ್ತು ಕೊಟ್ಟ ವರಕ್ಕೆ ಯಾವ ಬೆಲೆಯೂ ಇಲ್ಲ. ಯಾರನ್ನಾದರೂ ಇವರು ಶಪಿಸಿದರೆ ಅದು ಅವರಿಗೆ ಸ್ವಲ್ಪವೂ ಅಂಟುವುದಿಲ್ಲ, ಇವರೂ ಕೊಟ್ಟ ವರ ಯಾವುದೂ ಬರುವಹಾಗೆ ಇಲ್ಲ. ಯಾವುದೂ ರೆಕ್ಟಿಫೈ ಆಗುವು ದಿಲ್ಲ. ಅದಕ್ಕೇ ನಾನು ಹೇಳಿದ್ದು—ಮಾನ್ಯ ಮುಖ್ಯಮಂತ್ರಿಯವರು ಈ ಕಲಿಯುಗದ ಆಧುನಿಕ ದೂರ್ವಾಸ ಮುನಿಗಳು' ಎಂದು. ಇವರಿಗೆ ಆ ಎರಡೂ ಶಕ್ತಿಯೂ ಇಲ್ಲ. ಇವರು ವರ ಕೊಟ್ಟರೆ ಅವೇನೂ ಸಿಕ್ಕುವಹಾಗೆ ಇಲ್ಲ ; ಶಾಪ ಕೊಟ್ಟರೂ ಅದರಿಂದ ಯಾರಿಗೂ ಏನೂ ತಟ್ಟುವುದಿಲ್ಲ. ಇವರು ಎಷ್ಟೆಷ್ಟು ಶಾಪ ಕೊಟ್ಟರೂ ಅದು ಇವರಿವರಿಗೆ ತಟ್ಟಬೇಕೇ ಹೊರತು ಇನ್ನ್ಯಾರಿಗೂ ತಟ್ಟುವು ದಕ್ಕೆ ಕಾರಣವಿಲ್ಲ. ಆ ತಪಸ್ಸು ಇವರಿಗಿಲ್ಲ. ಹೀಗಿದ್ದೂ ಕೂಡ ಇವರು ಒಂದು ರೀತಿಯಲ್ಲಿ ಎಮೋಷನಲ್ ಆಗಿ ಇರುತ್ತಾರೆ. ಯಾರಾದರೂ ಇವರನ್ನು ಹೊಗಳಿಬಿಟ್ಟರು ಎಂದರೆ ತಕ್ಷಣ ಏನಾದರೂ ಹೇಳಿಬಿಡುತ್ತಾರೆ. ಒಮ್ಮೆ ರೈತರ ಬಗ್ಗೆ ಕೆಲವರು ಕೇಳಿದಾಗ ಇಲ್ಲಿ ಆಟಾಟೋಪದಲ್ಲಿ ಹೇಳಿಬಿಟ್ಟರು, ಇದೇ ಸಭೆಯಲ್ಲಿ ೮೬ ಕೋಟಿ ರೂಪಾಯಿಗಳನ್ನು ಬಿಟ್ಟುಬಿಡುತ್ತೇವೆ ಎಂದು ಹೇಳಿದರು. ಅಲ್ಲಿ ಹೋಗಿ ದಾಖಲೆ ತೆಗೆದು ನೋಡಿದರೆ ಏನೂ ಇಲ್ಲ, ಫುಸ್ ಆಗಿದೆ, ಈ ೮೬ ಕೋಟಿ ರೂಪಾಯಿಗಳ ಜೊತೆಗೆ, ಅವರು ೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಕೇವಲ ೭೬ ಲಕ್ಷ ರೂಪಾಯಿ ಗಳ ಸಾಲವನ್ನು ವಜಾ ಮಾಡಿದ್ದಾರೆ, ಇದು ಆಯಿತು. ಇದು ಸಣ್ಣ ಮತ್ತು ಅತಿ ಸಣ್ಣ ರೈತರ ಕತೆ, ದೇವರಿಗೇ ಪ್ರೀತಿ ಅವರ ಕತೆ, ಈಗ ಅದನ್ನೆಲ್ಲಾ ವಸೂಲು ಮಾಡಬೇಕಾಗಿದೆ. ಸರ್ಕಾರಕ್ಕೆ ಬರತಕ್ಕಂಥ ಬಾಕಿ ಹಣವಾಗಲೀ, ರೆವಿನ್ಯೂ ಹಣವಾಗಲೀ ಅಂದರೆ ಕಂದಾಯವಾಗಲೀ, ನೀರು ಕಂದಾಯವಾಗಲೀ, ಮತ್ತೊಂದು ಆಗಲಿ ಅದನ್ನು ಬಿಡಬೇಕು ಎಂದು ನಾನಂತೂ ಹೇಳುವವನಲ್ಲ.

ಸರ್ಕಾರಕ್ಕೆ ಆದರಿಂದ ಆದಾಯ ಬರಬೇಕು. ನಾನು ಯಾವ ಸಂದರ್ಭದಲ್ಲೂ ಕೂಡ ಸರ್ಕಾರ ಇದನ್ನು ಬಿಡಬೇಕು ಅಥವಾ ಇದನ್ನು ಬಿಟ್ಟುಬಿಡಿ ಎಂದು ಹೇಳಿದವನಲ್ಲ. ನಿಮ್ಮ ಒಂದು ಉತ್ಸುಕತೆಯಲ್ಲಿ. ನಿಮ್ಮ ಒಂದು ಆತುರದಲ್ಲಿ ಈ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಎಲ್ಲರನ್ನೂ ನಿಮ್ಮ ಕಡೆ ಎಳೆದುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಇದನ್ನು ಬಿಟ್ಟುಬಿಡುತ್ತೇವೆ, ಅದನ್ನು ಬಿಟ್ಟುಬಿಡುತ್ತೇವೆ' ಎಲ್ಲವನ್ನೂ ಬಿಟ್ಟುಬಿಡುತ್ತೇವೆ ಎಂದು ಹೇಳಿದವರು ನೀವೇ. ನೀವು ಅದನು ಕಾರ್ಯಗತ ಮಾಡುವುದಕ್ಕೆ ಹೋದಾಗ ನಿಮಗೆ ಕಷ್ಟಕ್ಕೆಬಂತು. ಅದನ್ನೆಲ್ಲಾ ಬಿಡುವುದಕ್ಕೆ ಹೋದರೆ ಕಷ್ಟಕ್ಕೆ ಬರುತ್ತದೆ ಎಂದು ಗೊತ್ತಾದಕೂಡಲೇ ನೀವು ಏನು ಮಾಡುವುದಕ್ಕೆ ಶುರು ಮಾಡಿದಿರಿ ಎಂದರೆ' ನೀವು ಎಷ್ಟು ಸರಳವಾಗಿ ಅದನ್ನು ಬಿಟ್ಟುಬಿಡುತ್ತೇವೆ ಎಂದು ಹೇಳಿದಿರೋ ಅಷ್ಟೇ ಕಠಿಣವಾಗಿ ವಸೂಲು ಮಾಡುವುದಕ್ಕೆ ಹೊರಟಿರಿ. ಮೊದಲೇ ಪ್ರತಿ ವರ್ಷ ಅದನ್ನು ವಸೂಲು ಮಾಡಿದ್ದಿದ್ದರೆ ಸಣ್ಣಪುಟ್ಟ ಜನ ಆ ೧೫೦, ೨೦೦ ರೂಪಾಯಿಗಳನ್ನು ಇದಕ್ಕೆ ಹಾಕಿದ್ದರೆ ಅವರ ಸಾಲವೇ ತೀರಿ ಹೋಗಿರುತ್ತಿತ್ತು. ಅದನ್ನೂ ನೀವು ಹಾಳು ಮಾಡಿದಿರಿ. ಅವರು ಸಾಲ ತೀರಿಸುವುದನ್ನೂ ಬಿಡಿಸಿದಿರಿ, ನೀವೂ ಕಂದಾಯವನ್ನು ವಸೂಲು ಮಾಡಲಿಲ್ಲ. ಇದೆಲ್ಲದರ ಪರಿಣಾಮ ಏನಾಯಿತು ಎಂದರೆ ಅವರಿಗೆ ಒಂದೇ ಸಾರಿ ಎರಡು ವರ್ಷದಲ್ಲಿ, ೩ ವರ್ಷದು ಬಾಕಿ ತಲೆಯಮೇಲೆ ಬಂದು ಕುಳಿತಿದೆ. ಅದನ್ನೆಲ್ಲಾ ಅವರು ತಲೆಯಮೇಲೆ ಇಟ್ಟುಕೊಂಡು ಇರಬೇಕಾದರೆ, ಅದನ್ನೆಲ್ಲಾ ಒಂದೇ ಸಾರಿ ಕೊಡಿ ಎಂದು ನೀವು ಹೇಳುತ್ತಿದ್ದೀರಿ, ಅದನ್ನು ಕೊಡಲಿಲ್ಲ ಎಂದರೆ ಎತ್ತು ಹಿಡಿದುಕೊಂಡು ಹೋಗಿ, ಕರು ಹಿಡಿದುಕೊಂಡು ಹೋಗಿ, ಅವರ ಮನೆ ಹರಾಜು ಹಾಕಿ ಎಂದು ನೀವು ಹೇಳುತ್ತಿದ್ದೀರಿ. ಇದೆಲ್ಲಾ ನನಗೆ ಗೊತ್ತಿದೆ. ಶಿವಮೊಗ್ಗದಲ್ಲಿ ಯಾರದೋ ಕಾರನ್ನು ಈ ವಿಚಾರದಲ್ಲಿ ಅಟ್ಯಾಕ್ ಮಾಡಿದರು ಎಂದು ಪೇಪರ್‌ನಲ್ಲಿ ಬಂದಿದೆ. ಅಂಥಾದ್ದು ನೂರಲ್ಲ ಸಾವಿರ ಮಾಡಲಿ, ಏಕೆಂದರೆ ಒಂದು ಕಾರು ಇಟ್ಟುಕೊಂಡಿರುವ ಮನುಷ್ಯ ಕಂದಾಯದ ಬಾಕಿಯನ್ನು ಕೊಡಬಾರದು ಎಂದು ನಾನಂತೂ ಹೇಳುವುದಿಲ್ಲ. ಅದನ್ನು ನಾನೂ ಮಾಡಿಸಿದ್ದೇನೆ. ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಇಂಥಾದ್ದನ್ನು ಅಲ್ಲೊಂದು ಇಲ್ಲೊಂದು ಮಾಡುತ್ತಾರೆ. ಈ ಸಣ್ಣಪುಟ್ಟ ಜನ ಹೊಟ್ಟೆಗಿಲ್ಲದೇ ಇರುವ ಜನ ತಿನ್ನುವುದಕ್ಕೆ ಅನ್ನವಿಲ್ಲದೇ ಇರುವ ಜನ ಯಾರಿದ್ದಾರೆ ಅವರ ಮನೆಯಲ್ಲಿರುವ ವಸ್ತುಗಳನೆಲ್ಲಾ ಹರಾಜು ಮಾಡಿ ಎಂದು ಹೇಳುತ್ತೀರಿ. ಅವರು ಸಾಲ ಕೊಡುವುದರಲ್ಲಿ ನಿಧಾನ ಮಾಡುವುದಕ್ಕೆ ಅವಕಾಶ ಕೊಟ್ಟವರೂ ನೀವೇ ಒಂದು ಸಲ ಎಲ್ಲಾ ಸಾಲವನ್ನೂ ಕೊಡಿ ಎಂದು ಹೇಳುವವರೂ ನೀವೆ. ಇನ್ನೊಂದು ಕಡೆ ಈ ಲೆವಿ ಪದ್ಧತಿಯನ್ನು ನೀವು ತೆಗೆದಿರಿ. ಈ ಬಗ್ಗೆ ಒಂದು ಪ್ರಶ್ನೆಯನ್ನು ಕಳಿಸಿ ನಾವು ಇನ್ನೂ ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಮಾನ್ಯ ಶ್ರೀಕಂಠಯ್ಯನವರು ಆವತ್ತು ಹೇಳಿಬಿಟ್ಟರು, ಇದನ್ನು ಮುಂದಕ್ಕೆ ಹಾಕಿ. ನಾವು ಉತ್ತರ ಕೊಡುತ್ತೇವೆ ಎಂದು. ಅವರು ಉತ್ತರ ಕೊಟ್ಟಿದ್ದಾರೇನು ? ಅದನ್ನು ತಡೆಹಿಡಿದರು. ಆ ಬಗ್ಗೆ ತಾತ್ಕಾಲಿಕವಾಗಿ ಏನೂ ಉತ್ತರ ಇಲ್ಲವೇ ಇಲ್ಲ. ಈ ಬಜೆಟ್ ಮುಗಿಯುವುದರೊಳಗೆ ಯಾವುದೂ ಇಲ್ಲವೇ ಇಲ್ಲ ಆಮೇಲೆ ನೋಡಿಕೊಳ್ಳೋಣ ಎಂದು ಹೇಳಿದಿರಿ. ಆದರೆ ಅವರು ಅಲ್ಲಿ ಏನು ಮಾಡಿದರು ? ಭತ್ತವನ್ನು ವಸೂಲು ಮಾಡುವುದು— ಅಕ್ಕಿಯನ್ನು ವಸೂಲು ಮಾಡುವುದು—ಈ ರೀತಿ ಮಾಡಿದರು. 'ನಿಮ್ಮ ರೈತರುದು ಏನೂ ಇಲ್ಲ, ರೈತರಿಗೆ ಎಲ್ಲವನ್ನೂ ಬಿಟ್ಟುಬಿಟ್ಟಿದೇವೆ' ಎಂದು ಹೇಳುತ್ತಿದ್ದೀರಿ.

ಹಿಂದಿನ ಸರ್ಕಾರದವರು ಎಷ್ಟು ತೊಂದರೆಯನ್ನು ಕೊಟ್ಟಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರೈತರಿಗೆ ಎಷ್ಟು ಅನು ಕೂಲವನ್ನು ಮಾಡಿಕೊಟ್ಟಿದ್ದಾರೆ ಎಂದು ಹೇಳಿಕೊಳ್ಳುವುದಕ್ಕೆ ತಾವು ಈ ಒಂದು ಪದ್ಧತಿಯನ್ನು ಜಾರಿಗೆ ತಂದಿದ್ದೀರಿ ಎಂದು ನನಗನಿಸುತ್ತದೆ. ತಾವು ಲೆವಿಯನ್ನು ನೇರವಾಗಿ ರೈತರಿಂದ ವಸೂಲು ಮಾಡದೆ ಮಿಲ್‌ಗಳ ಮುಖಾಂತರ ಲೆವಿಯನ್ನು ವಸೂಲು ಮಾಡುತ್ತಿದ್ದೀರಿ. ಈ ಒಂದು ಕ್ರಮ ಯಾರಿಗೆ ತಾನೇ ಗೊತ್ತಿಲ್ಲ. ಈ ದೇಶದಲ್ಲಿರತಕ್ಕಂತಹ ಪ್ರತಿಯೊಬ್ಬ ರೈತನೂ ಕೂಡ ಮಿಲ್‌ಗಳ ಮುಖಾಂತರವೇ ಅಕ್ಕಿಯನ್ನು ಮಾಡಿಸಬೇಕು. ಆದ್ದರಿಂದ ಈ ಒಂದು ಜವಾಬ್ದಾರಿಯನ್ನು ಮಿಲ್‌ಗಳವರಿಗೆ ವಹಿಸಿವರೆ ಆ ಮಿಲ್ ಮಾಲೀಕರಿಂದ ಸರ್ಕಾರಕ್ಕೆ ೫೦ ಭಾಗದಷ್ಟು ಲೆವಿ ಕೊಡಬೇಕು ಮತ್ತು ಹೊರ ದೇಶಗಳಿಗೆ ಕಳುಹಿಸಿಕೊಟ್ಟರೆ. ೭೫ ಭಾಗದಷ್ಟು ಕೊಡಬೇಕು ಎಂದು ತಾವು ಹೇಳಿದ್ದೀರಿ. ಒಂದು ಕಡೆ ರೈತರಿಗೆ ನಿಮ್ಮದು ಏನೂ ಇಲ್ಲವೆಂದು ಹೇಳುತ್ತೀರಿ. ತಾವು ಮಾಡಿರುವ ಕೆಲಸವೇನೆಂದರೆ ಸುತ್ತಲು ಬೇಲಿಯನ್ನು ಹಾಕಿ ಎಲಿಯೋ ಒಂದು ಕಡೆ ಕಿಂಡಿಯನ್ನು ಇಟ್ಟು ಅಲ್ಲಿಗೆ ಬಂದ ತಕ್ಷಣ ಹಿಡಿದು ಅಮುಕಿ ಹಾಕುವ ಒಂದು ಕೆಲಸವನ್ನು ತಾವು ಮಾಡಿದ್ದೀರಿ. ಈ ಒಂದು

ಪದ್ಧತಿಯಿಂದ ಪರಿಣಾಮ ಏನಾಗಿದೆ ಎಂದರೆ ರೈತರ ಶೋಷಣೆಯಾಗುತ್ತಿದೆ. ಈ ದೇಶದ ರೈತರ ಬಗ್ಗೆ ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿದೆ. ಎಲ್ಲಾ ಸದಸ್ಯರೂ ಕೂಡ ಹಳ್ಳಿಗಾಡು ಪ್ರದೇಶಗಳಿಂದ ಬಂದಿರತಕ್ಕಂತವರೇ ಆದ್ದರಿಂದ ಅವರಿಗೆ ಈ ರೈತರ ಪರಿಸ್ಥಿತಿ ಏನು ಎಂದು ಚೆನ್ನಾಗಿ ಗೊತ್ತಿದೆ. ಯಾರಿಗಾದರೂ ಗೊತ್ತಿರದಿದ್ದರೆ ನನ್ನ ಜೊತೆಯಲ್ಲಿ ಬನ್ನಿ ಯಾವ ಒಂದು ಹಳ್ಳಿಗಾದರೂ ಹೋಗಿ ನೋಡಿಕೊಂಡು ಬರೋಣ ಇವತ್ತು ರೈತರಿಂದ ನಮ್ಮ ಸರ್ಕಾರಕ್ಕೆ ಲೆವಿ ಬಂದಿರತಕ್ಕಂತದ್ದು ಒಂದು ಲಕ್ಷ ಇಪ್ಪತ್ತು ಟನ್ ಅಕ್ಕಿಯೆಂದು ತಾವು ಒಂದು ಕಡೆ ಹೇಳುತ್ತಿದ್ದೀರಿ. ಈ ಲೆವಿಯನ್ನು ಕೊಟ್ಟಿರತಕ್ಕಂತಹವರು ಸಾಮಾನ್ಯವಾದ ಸರ್‌ಪ್ಲಸ್ ಪೀಪಲ್ಸ್ ಅಲ್ಲ. ನಮ್ಮ ಲೆಕ್ಕಕ್ಕೆ ಸುಮಾರು ೧೦೦ಕ್ಕೆ ಒಂದು ೧೦-೧೫ ಭಾಗದ ಜನರು ಮಾತ್ರ ಈ ಸರ್‌ಪ್ಲೆಸ್ ಹೋಲ್ಡರ್ಸ್. ಸರ್‌ಪ್ಲೆಸ್ ಹೋಲ್ಡರ್ಸ್ ಎಂದರೆ ತನಗೆ ಸಾಕಷ್ಟು ಇಟ್ಟುಕೊಂಡು ಉಳಿದ ಬತ್ತವನ್ನು ಯಾರು ಮಾರಾಟ ಮಾಡುತ್ತಾರೋ ಅಂತಹವರು ಸರ್‌ಪ್ಲೆಸ್ ಪೀಪಲ್ಸ್. ಸಾಮಾನ್ಯವಾಗಿ ನಾನು ಮತ್ತು ಶ್ರೀಮಾನ್ ಶ್ರೀನಿವಾಸ್‌ರವರು ಹಾಗೂ ನಮ್ಮ ಶ್ರೀ ಜೆ. ಹೆಚ್. ಪಟೇಲ್‌ರಂತಹವರು ಈ ಲೆವಿಯನ್ನ ಕೊಟ್ಟಿಲ್ಲ. ಸಾಮಾನ್ಯವಾಗಿ ಲೆವಿಯನ್ನು ಕೊಟ್ಟಿರುವುದು. No surplus holder has taken this Paddy either to merchants or to the mill owner. ಒಂದು ವರ್ಗದ ಜನ ಸಾಮಾನ್ಯವಾಗಿ ಬತ್ತವನ್ನು ಮಾರಾಟ ಮಾಡಬೇಕೆಂದು ಹೋದಾಗ ಈಗ ಒಂದು ಮೂಟೆ ಬತ್ತದ ಬೆಲೆ ೧೫೦ ರೂಪಾಯಿಗಳು ಇತ್ತು. ಆಮೇಲೆ ೧೮೦ ರೂಪಾಯಿಗಳಿಂದ ೧೯೦, ೨೦೦ ರೂಪಾಯಿಗಳವರಿವಿಗೆ ಹೆಚ್ಚಿತ್ತು. ಈ ರೀತಿಯಾಗಿ ನಾವು ನಮ್ಮ ಪಾಲಸಿಯನ್ನು ಅನುಸರಿಸಿಕೊಂಡು ಹೋಗಿದ್ದರಿಂದ ಎಷ್ಟು ಬತ್ತ ಹೋಯಿತು ಎಂಬುದು ನನಗೆ ಗೊತ್ತು. ತಾವು ಈ ಪದ್ಧತಿಯನ್ನು ಜಾರಿಗೆ ತಂದಿದ್ದರಿಂದ ಪರಿಣಾಮ ಏನಾಗಿದೆ ಎಂದರೆ ಬಡವರಿಗೆ ತೊಂದರೆಯನ್ನು ಕೊಟ್ಟಿದ್ದೀರಿ. ಬಡವರಿಗೆ ಏನೇನೂ ಕಷ್ಟಗಳು ಇರುತ್ತವೆ. ಅವರು ವಿಧಿ ಇಲ್ಲದೆ ಮಾರಾಟ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಮಿಲ್‌ಗಳಿಗೆ ಬಂದರೆ ಅವರು ಲೆವಿಯನ್ನು ಕೊಡಬೇಕಾಗುತ್ತದೆ. ಇದರಿಂದ ಅವರು ಮನೆಗಳಲ್ಲಿಯೇ ಮಾರಾಟ ಮಾಡುವಂತಹ ಜನರು ಬೇಕಾದಷ್ಟು ಜನರು ಇದ್ದಾರೆ. ಮಿಲ್‌ಗಳಲ್ಲಿ ಬತ್ತವನ್ನು ಇಟ್ಟುಕೊಂಡಿರುತ್ತಾರೆ. ಆಗ ಜಿಲ್ಲಾಧಿಕಾರಿಗಳು ಅಲ್ಲಿಗೆ ಹೋಗಿ ಮಿಲ್ ಮಾಲೀಕರನ್ನು ಹೊಂದಿಕೊಂಡು ನಾವು ನಮ್ಮ ಟಾರ್‌ಗೇಟ್ ರೀಚಾಗಬೇಕಾಗಿದೆ ಆದ್ದರಿಂದ ಸ್ವಲ್ಪ ಲೆವಿಯನ್ನು ಕೊಡಿ ಎಂದು ಅಂತರಂಗದಲ್ಲಿ ಅವರು ವ್ಯವಹಾರವನ್ನು ಮಾಡಿಕೊಳ್ಳುತ್ತಾರೆ. ಈ ರೀತಿ ಅನೇಕ ಕಡೆಗಳಿಂದ ನನಗೆ ವರ್ತಮಾನ ಬಂದಿದೆ. ಇದರ ಪರಿಣಾಮ ಏನಾಗಿದೆ ಎಂದರೆ ಒಂದು ಕ್ವಿಂಟಾಲ್ ಬತ್ತದ ಬೆಲೆ ೧೨೫ ರೂಪಾಯಿಗಳಿಗೆ ಸಿಕ್ಕಿದೆ. ತಾವು ಓಪನ್ ಡಿಪೋಗಳನ್ನು ಮಾಡಿದ್ದೀರಿ. ಇದರಲ್ಲಿ ಎಷ್ಟು ಹಣವನ್ನು ವಸೂಲು ಮಾಡಿದ್ದೀರಿ ? ಇದು ರೈತರಿಗೆ ತಲೆಯ ಮೇಲೆ ಒಂದು ದೊಡ್ಡ ಹೊರೆ ಬಿದ್ದಂತೆ ಆಗಿದೆ. ಇದೇ ಸಮಯದಲ್ಲಿ ಕಂದಾಯ ಕಟ್ಟಬೇಕಾಗಿರುತ್ತದೆ. ಕೋ ಆಪರೇಟಿವ್ ಸೊಸೈಟಿಯ ಸಾಲವನ್ನು ಕಟ್ಟಬೇಕಾಗಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ತಾವು ಈ ಲೆವಿ ಪದ್ಧತಿಯನ್ನು ತಂದಿದ್ದರಿಂದ ಏನು ಅನುಕೂಲವಾಗಿವ. You have almost killed most of these small and marginal farmers and so called non-surplus holders. Surplus holders have not come to your clutches. But the non-surplus holders have been punished as a result of this. ಹಾಗೆಯೇ ಎಲ್ಲಾ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರ ಹೇಳಿಕೆಯನ್ನು ಕೊಟ್ಟಿದೆ. ನಮ್ಮ ರಾಜ್ಯದಲ್ಲಿ ಅನೇಕ ರಾಜ್ಯದಲ್ಲಿ ಅನೇಕ ಟೌನ್‌ಗಳಿವೆ. ಅನೇಕ ಮುನಿಸಿಪಾಲಿಟಿಗಳು ಇವೆ. ಅನೇಕ ಕಾರ್ಪೊರೇಷನ್‌ಗಳು ಇವೆ. ಅನೇಕ ಪಂಚಾಯಿತಿಗಳು ಇವೆ. ಈ ಎರಡು ವರ್ಷಗಳಿಂದ ಪಂಚಾಯಿತಿಗಳಿಗೆ ಮತ್ತು ತಾಲ್ಲೂಕು ಬೋರ್ಡ್‌ಗಳಿಗೆ ಏನು ಸಹಾಯವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ. ಈ ವಿಷಯದ ಬಗ್ಗೆ ನಮ್ಮ ಅರ್ಥ ಮಂತ್ರಿಗಳು ಒಂದು ಶಬ್ದವನ್ನು ಕೂಡ ಮಾತನಾಡಿಲ್ಲ. ತಾಲ್ಲೂಕು ಬೋರ್ಡ್‌ಗಳ ಪರಿಸ್ಥಿತಿ ಏನಾಗಿದೆ, ಪಂಚಾಯಿತಿಗಳ ಪರಿಸ್ಥಿತಿ ಏನಾಗಿದೆ ಎಂದು ಅವರು ತಿಳಿದುಕೊಂಡಿಲ್ಲ ೧೯೭೧ನೇ ಇಸವಿಯಲ್ಲಿ ನಾನು ಎಲ್ಲಾ ಪಂಚಾಯಿತಿ ಅಧ್ಯಕ್ಷರನ್ನು ಕರೆದು ಒಂದೊಂದು ಪಂಚಾಯಿತಿಗೆ ಎಷ್ಟೆಷ್ಟು ಹಣವನ್ನು ಕೊಡಬೇಕು ಎಂದು ಸಮಾಲೋಚನೆ ಮಾಡಿದ್ದೆವು. ಆದರೆ ಅದು ಇವತ್ತು ಇಲ್ಲ. It is supposed to be a Local Authority, what is called as Local

Self Government. ಪಂಚಾಯಿತಿಗಳು ಲೋಕಲ್ ಗೌರ್ನ್‌ಮೆಂಟ್, ತಾಲ್ಲೂಕು ಬೋರ್ಡ್ ಸಹ ಲೋಕಲ್ ಗೌರ್ನ್‌ಮೆಂಟ್, ಇವುಗಳಿಗೆ ಖರ್ಚು ಮಾಡುವುದಕ್ಕೆ ಹಣವಿಲ್ಲವೆಂದು ಹೇಳಿ ಪಂಚಾಯಿತಿಗಳಿಂದ ಬರುವ ಕಂದಾಯವನ್ನು ಅವರಿಗೆ ಕೊಡಬೇಕೆಂದು ಮಾಡಿದ್ದೆವು. ಆದರೆ ಅದು ಬದಲಾವಣೆಯಾಗಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ನಿಮ್ಮ ಕಾಲಕ್ಕಿಂತ ನಮ್ಮ ಕಾಲದಲ್ಲಿ ಹೆಚ್ಚು ಬದಲಾವಣೆ ಮಾಡಿ ಅಭಿವೃದ್ಧಿಯನ್ನು ಮಾಡಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ಬದಲಾವಣೆ ಮಾಡಿ ಅಭಿವೃದ್ಧಿ ಮಾಡಿದ್ದೇವೆಂದು ಎಲ್ಲಿದೆ. ಆ ರೀತಿ ಏನಾದರೂ ಇದ್ದರೆ ನಾನು ತಿದ್ದಿಕೊಳ್ಳುತ್ತೇನೆ. ಅವರೇ ತಿಳಿದು ಕೊಂಡಿದ್ದಾರೆ. ಏನಪ್ಪ ನಮ್ಮ ಗತಿ ಹೀಗಾಯಿತಲ್ಲವೆಂದು. ಶ್ರೀಮಾನ್ ಮಲ್ಲಿಕಾರ್ಜುನ ಖಾರ್ಗೆಯವರು ಸ್ವಲ್ಪ ದಯವಿಟ್ಟು ಈ ಕಡೆ ನೋಡಿ. ತಾವು ರೆವಿನ್ಯೂ ಮಂತ್ರಿಗಳು ನಿಮ್ಮ ಸಂಸಾರದ ಗುಟ್ಟು ಇಲ್ಲಿ ಮಾತನಾಡುವುದು ಬೇಡ. ನೀವು ಎಲ್ಲಾ ಕಡೆಗಳಲ್ಲಿಯೂ ಕೂಡ ೨೨೦–೨೩೦ ಮನೆಗಳನ್ನು ಕಟ್ಟಿಕೊಡಬೇಕೆಂದು ಹೇಳಿ ಸುಮಾರು ೧೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಈ ೨೩೦ ಮನೆಗಳಿಗಿಂತ ಹೆಚ್ಚು ಕಟ್ಟಿಕೊಡುವುದಕ್ಕೆ ನಿಮ್ಮ ಕೈಯಲ್ಲಿ ಸಾಧ್ಯವಾಗುವುದಿಲ್ಲ. ನೀವು ಈಗ ಎಷ್ಟು ಮನೆಗಳನ್ನು ಕಟ್ಟಿ ಕೊಟ್ಟಿದ್ದೀರಿ. ನಾವು ಆಡಳಿತದಲ್ಲಿ ಇದ್ದಾಗ ಕಟ್ಟಿಕೊಟ್ಟಿರುವ ಮನೆಗಳ ಲೆಕ್ಕವನ್ನು ತೆಗೆದುಕೊಂಡು ನಾವು ಹೆಚ್ಚು ಮನೆಗಳನ್ನು ಕಟ್ಟಿಕೊಟ್ಟಿದ್ದೇವೆಂದು ಹೇಳಿ ನಿಮ್ಮ ಸರ್ಕಾರದ ಬುಜಕೀರ್ತಿಯನ್ನು ಕಟ್ಟಿ ಕೊಳ್ಳುವುದಕ್ಕೆ ಹೊರಟಿದ್ದೀರಿ. ಇನ್ನು ಜನತಾ ಮನೆಗಳನ್ನು ನೀವು ಕೋಲ್ಯಾಪ್ಸ್ ಮಾಡಿದ್ದೀರಿ. ನೀವು ಈ ಜನತಾ ಮನೆಗಳಿಗೆ ಒಂದು ಕಿಟಕಿಯನ್ನು ಕೊಟ್ಟಿದ್ದೀರಿ. ರೈತರು ಬೆಳೆದ ಪದಾರ್ಥಗಳಿಗೆ ಸರಿಯಾದಂತಹ ಬೆಲೆ ಇಲ್ಲ. ಒಂದು ಕ್ವಿಂಟಾಲ್ ಬತ್ತಕ್ಕೆ ೧೨೫ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಇದು ನಿಮ್ಮ ಸರ್ಕಾರದ ನೀತಿಯಾಗಿದೆ. ಇವರು ಪ್ರಯತ್ನ ಪಟ್ಟಿದ್ದಾರೆ, ನಾನು ಅದನ್ನು ಒಪ್ಪುತ್ತೇನೆ. ಇವರು ಪ್ರಯತ್ನ ಪಟ್ಟರು, ಅದು ಕೇಂದ್ರ ಸರ್ಕಾರದ ನೀತಿಯಾದುದರಿಂದ ಅವರು ಒಪ್ಪುವುದಿಲ್ಲ. ಆದರೆ ಕೇಂದ್ರ ಸರ್ಕಾರದ ನೀತಿ ಒಪ್ಪುವುದಿಲ್ಲ ಎಂದು ಅಷ್ಟು ಹೇಳುವುದಕ್ಕೆ ನಾನು ತೃಪ್ತನಲ್ಲ. ಯಾರೋ ಮೊನ್ನೆ ಹೇಳಿದರು. ಒಂದೇ ಪಾರ್ಟಿಯವರು ಅಲ್ಲೂ ಇದ್ದೀರಿ, ಇಲ್ಲೂ ಇದ್ದೀರಿ, ಹಣ ತರುವುದಕ್ಕೆ ಸಾಧ್ಯ ಎಂದು. ಅದು ಅಷ್ಟು ಸುಲಭವಾಗಿ ಆಗುವುದಿಲ್ಲ, ಪ್ರೈಮಿನಿಸ್ಟರ್ ಶ್ರೀಮತಿ ಇಂದಿರಾಗಾಂಧಿಯವರು ಇದ್ದಾರೆ. ಅವರು ನಿಮ್ಮ ಪಾರ್ಟಿ ಲೀಡರ್ ಇದ್ದರೂನೂ ಹಳ್ಳಿಯ ಜನರಿಗೆ ಅವರು ಬೆಳೆಯುತಕ್ಕ ಪದಾರ್ಥಗಳ ಬೆಲೆ ಯಾವತ್ತೂ ಕಡಿಮೇನೇ ಅವನಿಗೆ ಸಿಕ್ಕತಕ್ಕಂಥಾದ್ದು. ಕೆಲವು ದಿವಸಗಳ ಹಿಂದೆ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಯಲ್ಲಿ ಟೊಬ್ಯಾಕೊ ವಿಚಾರ ಬರೆದಿತ್ತು. ನಿಪ್ಪಾಣಿ ಟೊಬ್ಯಾಕೊ ವಿಚಾರ ಬರೆದಿತ್ತು. ಅಲ್ಲಿ ವರ್ಕರ್ಸ್ ಎನಿದ್ದಾರೆ, ಬೀಡಿ ಕಟ್ಟತಕ್ಕ ವರ್ಕರ್ಸ್ ಸ್ಥಿತಿ ಏನು, ಅದಕ್ಕೆ ಎಷ್ಟು ಹೊಗೆಸೊಪ್ಪು ಬೇಕಾಗುತ್ತದೆ, ಅವರಿಗೆ ಖರ್ಚು ಎಷ್ಟು, ಅವರಿಗೆ ಬರತಕ್ಕ ದುಡ್ಡು ಏನು ವರ್ಜೀನಿಯ ಟೊಬ್ಯಾಕೊ ವಿಚಾರ ಏನು ಎನ್ನುವುದೆಲ್ಲಾ ಪ್ರವರ ಬಂದಿದೆ. ಮೈಸೂರು ಭಾಗದಲ್ಲಿ. ಹಾಸನ ಭಾಗದಲ್ಲಿ ಶಿವಮೊಗ್ಗ ಭಾಗದಲ್ಲಿ, ಇಲ್ಲೆಲ್ಲಾ ಹೊಗೆಸೊಪ್ಪನ್ನು ಬೆಳೆಯುತ್ತಾರೆ. ಅಲ್ಲಿ ಒಂದು ರಫ್ ಕ್ಯಾಲುಕುಲೇಷನ್ ಮಾಡಿದರೆ ಸುಮಾರು ಒಂದು ಸಾವಿರ ಸಿಗರೇಟ್ ಲಾಸ್ಟ್ ವೆರೈಟಿ ಮಾಡಬೇಕಾದರೆ ೬೦–೬೫ ರೂಪಾಯಿ ಆಗುತ್ತದೆ. ರೈತನಿಗೆ ಸಿಗತಕ್ಕಂಥಾದ್ದು ವಿತಿನ್ ೨ ಪರ್ಸೆಂಟ್ ಮಾತ್ರ. ಮ್ಯಾನುಫ್ಯಾಕ್ಚರ್‌ಗೆ ೨ ಪರ್ಸೆಂಟ್, ಮ್ಯಾನುಫ್ಯಾಕ್ಚರಿಂಗ್ ಪ್ರೊಸೆಸ್‌ಗೆ ೨ ಪರ್ಸೆಂಟ್, ಇನ್ನು ಬಾಕಿ ಪರ್ಸೆಂಟೇಜೆಲ್ಲಾ ಮಿಡ್ಲ್‌ಮನ್‌ಗೆ, ಏಜೆನ್ಸೀಸ್‌ಗೆ, ಕಂಪೆನಿಗಳಿಗೆ, ಮ್ಯಾನುಫ್ಯಾಕ್ಚರರ್ಸ್‌ಗೆ ಇಂಥಾ ವರಿಗ ದುಡ್ಡು ಹೋಗುತ್ತದೆ. ಇಡೀ ದೇಶದ ಆರ್ಥಿಕ ಪರಿಸ್ಥಿತಿಯ ವಿಕಾರ ಸ್ವರೂಪ ಏನೆಂದರೆ, ಹಳ್ಳಿಗಳಲ್ಲಿ ರೈತ ಏನೇನು ಬೆಳೆಯುತ್ತಾನೆ, ಏನೇನು ಪ್ರೊಡ್ಯೂಸ್ ಮಾಡುತ್ತಾ ಇದ್ದಾನೆ ಅದಕ್ಕೆ ಬೆಲೆ ಇರುವುದಿಲ್ಲ. ಸುಗ್ಗಿ ಬಂತು ಎಂದರೆ ಇವರು ತರಿಸಿ ಇಟ್ಟುಕೊಳ್ಳುತ್ತಾರೆ ಇವರ ಜುಟ್ಟು ಯಾರ ಕೈಯಲ್ಲಿ ಅಂದರೆ ಸೊ ಕಾಲ್ಡ್ ಮರ್ಚೆಂಟ್ಸ್. ಮಿಲ್ ಓನರ್ಸ್ ಮುಂತಾದವರು. ಎಣ್ಣೆ ಬೀಜ ತೆಗೆದುಕೊಳ್ಳುತ್ತೀರಾ ಇದೇ ರೀತಿ ಹತ್ತಿ ತೆಗೆದುಕೊಳ್ಳುತ್ತೀರಾ ಇದೇರೀತಿ. ಮೆಣಸಿನಕಾಯಿ ಇದೇ, ರೀತಿ ಮೆಣಸಿನಕಾಯಿ ಬೆಳೆಯುವವರು ಮಾನ್ಯ ಮಂತ್ರಿಗಳ ಕ್ಷೇತ್ರದಲ್ಲಿ ಬೆಳೆದು ಗುಡ್ಡೆ ಹಾಕಿರುತ್ತಾರೆ ನಾನು ನೋಡಿದ್ದೇನೆ, ಬೆಟ್ಟದಷ್ಟು ರಾಶಿ ಹಾಕಿರುತ್ತಾರೆ. ಅದಕ್ಕೆ ಬೆಲೆ ಇರುವುದಿಲ್ಲ. ಆಲೂಗಡ್ಡೆಲ್ಲಿ ಕೋಲ್ಡ್ ಸ್ಟೋರೇಜ್ ರೈತನಿಗೆ ಸಿಕ್ಕುವಹಾಗಿಲ್ಲ. ಡಿಸ್ಟ್ರೆಸ್ ಸೇಲ್ ಆಗುತ್ತಾ ಇದೆ ಎಂದು ಪಾರ್ಲಿಮೆಂಟ್‌ನಲ್ಲಿ ಗಲಾಟೆಯಾಯಿತು. ಡಿಸ್ಟ್ರೆಸ್ ಸೇಲ್ ಆಗುತ್ತಾ ಇದೆ, ಭತ್ತ ಆಗಲಿ ರಾಗಿಯಾಗಲಿ, ಜೋಳವಾಗು ಆಗುತ್ತಾ ಇದೆ. ಈ ವರ್ಷ ಸೆಪ್ಟೆಂಬರ್, ಅಕ್ಟೋಬರ್ ತಿಂಗಳ ಹೊತ್ತಿಗೆ ಹೈಬ್ರಿಡ್ ಜೋಳ ಬಂದು

ಬಿಡುತ್ತದೆ. ನಾನು ಬಾದಾಮಿ ತಾಲ್ಲೂಕಿಗೆ ಹೋಗಿರಬೇಕಾದರೆ ಹಳ್ಳಿ ರೈತರು ಬಂದು ಹೇಳಿದ್ದಾರೆ, ಹೈಬ್ರಿಡ್ ಜೋಳ ಹೇಗಪ್ಪ ಮಾಡಿದೆ ಅಂದರೆ ೨೦ ರೂಪಾಯಿಗೆ ಮಾರಿದ್ದೇವೆಂದು ಹೇಳಿದರು. ೨೦ ರೂಪಾಯಿಗೆ ಮಾರಿದ್ದಾರೆ. ನಾನು ತಮಗೆ ಕೇಳುತ್ತೇನೆ. ೨೦ ರೂಪಾಯಿಗೆ ಹೈಬ್ರಿಡ್ ಜೋಳ ಮಾರಿದರೆ ರೈತನಿಗೆ ಏನು ಸಿಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ವಿಷಯ ಎಲ್ಲಾ ಯಾವತ್ತಿನಿಂದ ಆಯಿತು.

ಶ್ರೀ ಡಿ. ದೇವರಾಜ ಅರಸ್.—ಹಿಂದಿನಿಂದಲೂ ಇದೆ, ಕೇಂದ್ರದಲ್ಲೂ ಆಗುತ್ತಾ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮುಂಚೆಯಿಂದ ಇತ್ತು ಅಂದರೆ, ೪ ತಿಂಗಳ ಹಿಂದೆ ಅಥವಾ ೬ ತಿಂಗಳಿಂದ ಆಯಿತಾ ಅಥವಾ ಒಂದು ವರ್ಷದಿಂದ ಆಯಿತಾ ?

ಶ್ರೀ ಡಿ. ದೇವರಾಜ ಅರಸ್.—ಸಮಾಧಾನದಿಂದ ಕೇಳಿದರೆ ಎಲ್ಲಾ ಗೊತ್ತಾಗುತ್ತದೆ. ಇದರಲ್ಲಿ ನಿಮ್ಮೊಬ್ಬರದೇ ಜವಾಬ್ದಾರಿ ಇಲ್ಲ ಕೇಂದ್ರದ್ದೂ ಇದೆ.

ಶ್ರೀ ಎಂ, ವೀರಪ್ಪ ಮೊಯಿಲಿ.—ನಿಮ್ಮದೂ ಇದೆ.

ಶ್ರೀ ಡಿ. ದೇವರಾಜ ಅರಸ್.—ನನ್ನದು ಏನಿದೆ, ನನ್ನದು ಇದರಲ್ಲಿ ಏನಿದೆ ಹೇಳಿ ನೋಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವೂ ಕೂಡ ಇದ್ದರಲ್ಲಾ. ಯಾವಾಗಲೂ ಇದೆ.

ಶ್ರೀ ಡಿ. ದೇವರಾಜ ಅರಸ್.—ಅದಕ್ಕೇ ಯಾವಾಗಲೂ ಇರುವುದನ್ನು ಸರಿ ಮಾಡುವುದಕ್ಕೆ ಆಗುವುದಿಲ್ಲ ಎಂದು ನಾವು ಇಲ್ಲಿ ಕುಳಿತಿದ್ದೇವೆ, ನೀವು ಹೋಗಿ ಅಲ್ಲಿ ಕುಳಿತಿದ್ದೀರಿ ಅದಕ್ಕೆ ಉತ್ತರ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆ ಒಂದು ವಿಫಲತೆ, ಹತಾಶಭಾವನೆ ವ್ಯಕ್ತಪಡಿಸಿದಿರಿ.

ಶ್ರೀ ಡಿ. ದೇವರಾಜ ಅರಸ್.—ಹತಾಶಭಾವನೆ ಏನು, ನೀವು ಆಕಾಶಕ್ಕೆ ನೆಗೆಯುವ ಭಾವನೆ ಇಟ್ಟಿದ್ದೀರಿ, ಯುವಕರಿದ್ದೀರಿ, ಬಹಳ ಸಂತೋಷ. ಆಕಾಶಕ್ಕೆ ನೆಗೆದು ಏನು ಆಗಿದ್ದೀರಿ ಎಂದು ನಾನು ನೋಡುತ್ತಾ ಇದ್ದೇನೆ. ಇದನ್ನೆಲ್ಲಾ ನಿಮ್ಮ ಮುಖಕ್ಕೆ ಹಿಡಿಯುತ್ತೇನೆ. ನಮ್ಮ ದೇಶದಲ್ಲಿ ಆ ಆರ್ಥಿಕ ಪರಿಸ್ಥಿತಿ ಎಲ್ಲವೂ ಕೂಡ ಮಿಡ್ಲ್‌ಮನ್ ಮತ್ತು ಮನೀಡ್ ಕ್ಲಾಸಸ್‌ಗೆ ಅನುಕೂಲವಾಗತಕ್ಕ ಒಂದು ಪಾಲಿಸಿಯನ್ನು ನಾವು ಪರ್ಸ್ಯೂ ಮಾಡುತ್ತಾ ಇದ್ದೇವೆ. ಇದು ಬದಲಾವಣೆಯಾಗಬೇಕು, ಅದೇ ಕಾರಣ ನೀವು ಅಲ್ಲಿ ಕುಳಿತಿರುವುದಕ್ಕೆ ಮತ್ತು ನಾವು ಇಲ್ಲಿ ಕುಳಿತಿರುವುದಕ್ಕೆ. ನೀವೂ ನಾವೂ ಬಂದಾಗಲೇ ೨೫ ವರ್ಷಗಳಿಂದ ಈ ಪಾಲಿಸಿಯನ್ನು ಪರ್ಸ್ಯೂಮಾಡಿ ದೇಶದ ಪರಿಸ್ಥಿತಿಯನ್ನು ಅಧೋಗತಿಗೆ ತರುತ್ತಾ ಇದ್ದೇವೆ. ನಿಮಗೆ ಜ್ಞಾಪಕ ಇದ್ದರೆ ಜ್ಞಾಪಿಸಿಕೊಳ್ಳಿ. ಭತ್ತಕ್ಕೆ ಹೆಚ್ಚಿಗೆ ರೇಟು ಕೊಡಬೇಕು ಎಂದು ವರ್ಷ ಹೊಡೆದಾಡಿದರೂ ೧೦ ರೂಪಾಯಿ ಹೆಚ್ಚು ಮಾಡುವುದಕ್ಕೆ ಸುಸ್ತಾದೆ. ಆದರೂ ಅಕ್ಕಿ ರೇಟು ಇಳಿಯಲಿಲ್ಲ. ಭತ್ತದ ರೇಟು ೫ ವರ್ಷಗಳಲ್ಲಿ ಇದ್ದದ್ದು ೨ ವರ್ಷಗಳಲ್ಲಿ ಇದ್ದದ್ದು ೧೦೦ ರೂಪಾಯಿ ೧೨೦ ರೂಪಾಯಿ ಇವತ್ತು ೧೨೫ ರೂಪಾಯಿ ಸರ್ಕಾರಿ ರೇಟು. ಅಕ್ಕಿಗೆ ಇದೇ ರೇಟು ಇದೆಯೋ, ಅದಕ್ಕೂ ಇದಕ್ಕೂ ಕಂಪೇರ್ ಮಾಡಿದರೆ ಮಾರ್ಕೆಟ್‌ನಲ್ಲಿ ನಾಲ್ಕೂವರೆ ರೂಪಾಯಿ ಇದೆ. ರೇಷನ್ ಷಾಪ್‌ನಲ್ಲಿ ೨-೪೦ ರೂಪಾಯಿ ಇರಬಹುದು. ಹಿಂದೆ ೧-೬೦ ರಿಂದ ಶುರುವಾಯಿತು ಈಗ ೨-೪೦ ರೂಪಾಯಿಗೆ ಬಂದಿದೆ. ರೈತ ಕೊಳ್ಳುವುದೆಲ್ಲಾ ಬೆಲೆ ಜಾಸ್ತಿ, ಬಟ್ಟೆ, ಎಣ್ಣೆ, ಕಬ್ಬಿಣ ಇವೆಲ್ಲಾ ಬೆಲೆ ಜಾಸ್ತಿ. ಸಿಮೆಂಟ್ ಅಂತೂ ಸಿಕ್ಕುವಹಾಗಿಲ್ಲ. ರೈತ ಕೊಳ್ಳುವುದೆಲ್ಲಾ ವಿಪರೀತ ಬೆಲೆ, ಮಾರುವುದೆಲ್ಲಾ ಕಡಿಮೆ ಬೆಲೆ. ಈ ಒಂದು ಆರ್ಥಿಕ ಅಸಮಾನತೆ ನಮ್ಮ ದೇಶದಲ್ಲಿ ಇದೆ. ಅದನ್ನು ನೀವು ಒಪ್ಪುವುದಿಲ್ಲವೇ. ನಮ್ಮ ದೇಶದಲ್ಲಿ ಆರ್ಥಿಕ ಅಸಮಾನತೆ ಇಲ್ಲ ಎಂದು ಹೇಳುತ್ತೀರಾ, ಇದ್ದಮೇಲೆ ಅಸಮಾನತೆ ಇನ್ನೂ ಬೆಳೆದು ಕೊಂಡು ಹೋಗುವುದಕ್ಕೆ ಈ ರೀತಿಯಾದಂಥ ನೀತಿ ಕಾರಣವಿದೆ. ನಾವು ನೀವು ಇದ್ದಾಗಲೇ ಇತ್ತು ಎನ್ನುವುದಾದರೆ ನಿಮಗೆ ಅದನ್ನು ಸರಿಮಾಡಬೇಕು ಎನ್ನುವ ಮನಸ್ಸು ಇದ್ದರೆ ನಮ್ಮ ಜೊತೆಗೆ ಬನ್ನಿ, ಇಲ್ಲದಿದ್ದರೆ ಅಲ್ಲೇ ಇದ್ದುಕೊಂಡು ಸರಿ ಮಾಡಿ, ಸಂತೋಷ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾಡಲಿಕ್ಕೆ ಆಗದೇ ಹತಾಶರಾಗಿ ಆ ಕಡೆ ಹೋದಿರಿ. ಸರಿ ಮಾಡೋಣ. ಎಂದು ಇಲ್ಲಿಗೆ ಬಂದಮೇಲೆ ನಮಗೆ ಬಿಡಿ. ಆ ಕಡೆ ಹತಾಶರ ಗುಂಪಿಗೆ ನಮ್ಮನ್ನು ಏಕೆ ಸೇರಿಸುತ್ತೀರಿ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಜೊತೆಯಲ್ಲಿ ಬಂದರೆ ಕಲ್ಲು ಕಟ್ಟಿಕೊಂಡು ಹೊಳೆಯಲ್ಲಿ ಮುಳುಗಿದ ಹಾಗೆ ಆಗುತ್ತದೆ. ನಿಮ್ಮ ಜೊತೆಯಲ್ಲಿ ಬಂದರೆ ಅದೇ ಆಗುವುದು. ಏಕೆಂದರೆ ನಿಮಗೆ ಮುಳುಗುವ ಕಾಲ ಬಂದಿದೆ, ಗೊತ್ತಾಗುತ್ತದೆ ಇನ್ನು ಸ್ವಲ್ಪ ದಿವಸಗಳಲ್ಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ಮುಳುಗಿದವರು, ಹತಾಶರಾದವರು.

ಶ್ರೀ ಡಿ. ದೇವರಾಜ ಅರಸ್.—ನಾನು ಆ ಮಾತೇ ಆಡಿಲ್ಲ. ನಾನು ಹತಾಶನಾಗಿದ್ದರೆ ಇದನ್ನು ಹೇಳುತ್ತಾ ಇರಲಿಲ್ಲ. ದೇಶದ ಪರಿಸ್ಥಿತಿಯನ್ನು ಹೇಳುತ್ತಾ ಇದ್ದೇನೆ.

ಶ್ರೀ ಜೆ.ಹೆಚ್. ಪಟೇಲ್.—ಕೆಡವಬೇಡಿ ಅರಸರನ್ನು ಈ ಸುದ್ದಿ ಡೆಲ್ಲಿಗೆ ಗೊತ್ತಾದರೆ ನಿಮಗೆ ಅಪಾಯವಿದೆ.

ಶ್ರೀ ಡಿ. ದೇವರಾಜ ಅರಸು.—ನನ್ನನ್ನು ಕೆಡವಿದರೆ ಅವರಿಗೆ ಜಾಗವೇ ಇರುವುದಿಲ್ಲ, ನೀವು ಅಲ್ಲೇ ಇರಿ, ನಿಮ್ಮ ಕೈಯಲ್ಲಿ ಆಗದೇಹೋದರೆ, ನೋಡಿ ನಾವು ಏನು ಮಾಡುತ್ತೇವೆ ಎನ್ನುವುದನ್ನು.

ಶ್ರೀ ಎಂ. ವೀರಪ್ಪ ಮೊಯಿಲಿ.—ಆಗುವುದೇ ಇಲ್ಲ ಎಂದು ಹೇಳಿ.

ಶ್ರೀ ಡಿ. ದೇವರಾಜ ಅರಸ್.—ಆಗುವುದೇ ಇಲ್ಲ ಎಂದು ಹೇಳಿದ್ದರೆ. ಇದನ್ನು ಬಿಟ್ಟು ಬಿಟ್ಟು ನಾನು ಮನೆಗೆ ಹೋಗುತ್ತಿದ್ದೆ ಮಿಸ್ಟರ್. ನಮ್ಮ ಕೈಯಲ್ಲಿ ಆಗುವುದೇ ಇಲ್ಲ ಎಂದು ಹೇಳುತ್ತಾ ಇಲ್ಲ. ನಿಮ್ಮ ಕೈಯಲ್ಲಿ, ಶ್ರೀಮತಿ ಇಂದಿರಾಗಾಂಧಿಯವರ ಕೈಯಲ್ಲಿ ಆಗಲಿಲ್ಲ. ಇದನ್ನು ಮಾಡುವ ವಿಧಾನ ಬೇರೆ ಇದೆ ಎಂದು ಹೇಳುತ್ತಿದ್ದೇನೆ. ಆಗುವುದೇ ಇಲ್ಲ ಎಂದು ಹೇಳಿದ್ದರೆ, ನಾನು ಮನೆಯಲ್ಲಿ ಕುಳಿತು ಕೊಳ್ಳುತ್ತಿದ್ದೆ. ಹಿಂದೆ ಚೀಫ್ ಮಿನಿಸ್ಟರ್ ಆದವರು ಎಷ್ಟೋ ಜನ ಸುಮ್ಮನೆ ಇದ್ದುಬಿಟ್ಟಿದ್ದಾರೆ, ಆದರೆ ನಾನು ಸುಮ್ಮನೆ ಕುಳಿತಿಲ್ಲ. ಹತಾಶರಾಗಿದ್ದೀರಿ ಎಂದು ನೀವು ಹೇಳಿದಿರಿ ಹಾಗೇನಿಲ್ಲ. ಈ ದೇಶದಲ್ಲಿ ಇನ್ನೂ ಬದಲಾವಣೆ ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ತಿಳಿಯುವುದಕ್ಕೋಸ್ಕರ ಇಲ್ಲಿ ಕಾರ್ಯ ನಿರತನಾಗಿ ಕೆಲಸಮಾಡುತ್ತಿದ್ದೇನೆ. ಇನ್ನು ಎರಡು ಪಾಯಿಂಟ್ಸ್ ಇದೆ. ರೈತರಿಗೆ ಇವರು ಬಹಳ ಉಪಕಾರ ಮಾಡಿರುವುದು.

ಶ್ರೀ ಜಿ. ಬಿ. ಶಂಕರರಾವ್.— ಕಾಂಗ್ರೆಸ್ ಸರ್ಕಾರ ಪ್ರಾರಂಭವಾದಾಗಿನಿಂದ ಇದೆಯೋ?

ಶ್ರೀ ಡಿ. ದೇವರಾಜ ಅರಸ್.— ಕಾಂಗ್ರೆಸ್ ಸರ್ಕಾರ ಶುರುಮಾಡಿದಾಗ ಎಂದು ಹೇಳಿ, ನೀವೂ ಇದ್ದರಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ಹಾಗಾದರೆ ಒಂದು ಸಿದ್ಧಾಂತ ಆಯಿತು. ತಾವು ಯಾವಾಗಲೂ ನಮ್ಮ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಹೇಳುತ್ತಿದ್ದಿರಿ, ಹಿಂದೆ ಹಾಗಿರಲಿಲ್ಲ, ಮುಂದೆ ಆಗುವುದಿಲ್ಲ ಎಂದು ಮೊನ್ನೆ ಹೇಳಿದಿರಿ. ತಾವೂ ಕೂಡ ಹಿಂದೆ ಚೀಫ್ ಮಿನಿಷ್ಟರ್ ಆಗಿದ್ದಿರಿ. ರಿಟೈರ್ ಆದ ಚೀಫ್‌ಮಿನಿಷ್ಟರ್‌ಗಳಲ್ಲಿ ನಾನೇ ಸಕ್ರಿಯವಾಗಿ ಭಾಗವಹಿಸುತ್ತಿದ್ದೇನೆ ಎಂದು ಹೇಳಿದ ಹಾಗೆ ಆಯಿತು. ನಮ್ಮ ಮುಖ್ಯ ಮಂತ್ರಿಗಳು ಹೇಳಿದಕ್ಕೆ ತಾವು ಏಕೆ ಆಕ್ಷೇಪಣೆ ಮಾಡುತ್ತೀರಿ.

ಶ್ರೀ ಡಿ. ದೇವರಾಜ್ ಅರಸ್.— ಏನು ಹೇಳಿದಿರಿ, ನಿಮ್ಮ ವಿತ್ತಂಡ ವಾದ ಏನು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.— ಹಿಂದಿನವನ್ನು ನೆನಪು ಮಾಡಿಕೊಟ್ಟೆ.

ಶ್ರೀ ಡಿ. ದೇವರಾಜ ಅರಸ್.— ನೀವು ಹೇಳಿದನ್ನು ನಿಮಗೇ ಹೇಳಿದರೆ ಅರ್ಥವಾಗುವುದಿಲ್ಲ. ಸ್ವಾಮಿ, ಇನ್ನು ಎರಡು ವಿಚಾರ ಇದೆ. ಹಳ್ಳಿಯ ವಿಚಾರ. ರೈತರ ವಿಚಾರ, ಬಡವರ ವಿಚಾರ. ಡೆಟ್ ಲಿಕ್ವಿಡೇಷನ್ ಆಕ್ಟ್ ಮಾಡಿ ಎಷ್ಟು ದಿವಸ ಆಯಿತು ಹೇಳಬಲ್ಲಿರಾ, ಅದನ್ನು ಅಮೆಂಡ್‌ಮೆಂಟ್ ಮಾಡಿದ್ದು ಹೇಳಬಲ್ಲಿರಾ, ನೀವು ಬಂದಾಗಲೇ ಮಾಡಿದ್ದೀರಿ. ನಾನು ಆರ್ಡಿನೆನ್ಸ್ ತರಿಸಿದ್ದೆ, ಅದು ಇಲ್ಲಿ ಕನ್‌ಫರ್ಮ್ ಆಯಿತು. ಲಿಮಿಟ್‌ನ್ನು ೪೮೦೦ ರೂಪಾಯಿಗಳಿಗೆ ಏರಿಸಿದಿರಿ. ೪೮೦೦ ರೂಪಾಯಿಗಳ ಗಿಂತ ಕಡಿಮೆ ವರಮಾನ ಬರತಕ್ಕಂಥಾವರಿಗೆ ಸಾಲ ಎಲ್ಲಾ ವಜಾ ಆಗಬೇಕು ಎನ್ನುವುದು. ನೀವು ಎಷ್ಟು ಮಾಡಿದ್ದೀರಿ ಎಂದು ಹೇಳಬಲ್ಲಿರಾ. ೫೦ ಹಾಳೆ ಬರೆದುಕೊಂಡಿದ್ದೀರಿ, ಇದರ ಬಗ್ಗೆ ಒಂದೇ ಒಂದು ವರ್ಡ್ ಇಲ್ಲ. ಅದೇ ರೀತಿ ಪಾನ್ ಬ್ರೋಕರ್ಸ್ ಆಕ್ಟ್. ಗುಲ್ಬರ್ಗ ಜಿಲ್ಲೆಯಲ್ಲಿ ೪ ಕೋಟಿ ರೂಪಾಯಿ ಗಳ ಸಾಮಾನುಗಳನ್ನು ಹಿಂದಕ್ಕೆ ಕೊಡಿಸಿದ್ದೇನೆ.

೧–೦೦ ಪಿ.ಎಂ.

ಊರಿಂದ ಊರುಗಳಲ್ಲಿ ಇವತ್ತಿನ ದಿವಸ ನೀವು ಕ್ಯಾಬಿನೆಟ್ ಮೀಟಿಂಗ್‌ಗಳನ್ನು ನಡೆಸುತ್ತಿದ್ದೀರಲ್ಲಾ ಅದರಿಂದ ನೀವು ಏನು ಅಚೀವ್ ಮಾಡಿದ್ದೀರಿ? ಗಾಣಿಗಿತ್ತಿ ಅಯ್ಯೋ ಎಂದ ಹಾಗೆ ನೀವು ಬಡವರ ಬಗ್ಗೆ ಬರೀ ಅಯ್ಯೋ ಪಾಪ ಎಂದು ಹೇಳುತ್ತಿದ್ದೀರಿ. ಮಗುವಿನ ತಲೆಗೆ ಎಣ್ಣೆಯನ್ನು ಹಾಕಿ ತಿಕ್ಕದೆ ಎಣ್ಣೆಯನ್ನು ಬರೀ ತೋರಿಸಿದರೆ ಆಯಿತೇ ಆ ರೀತಿಯಾಗಿ ನೀವು ಬಡವರನ್ನು ನೋಡಿ ಅಯ್ಯೋ ಪಾಪ ಎಂದು ಹೇಳುತ್ತಿದ್ದಿರಿ. ಯಾರಿಗೆ ಅನುಕೂಲವಾಗಿದೆ? ಲ್ಯಾಂಡ್ ರಿಫಾರಂಸ್‌ನಿಂದ ೧೨ ಲಕ್ಷ ಎಕರೆ ಕೊಟ್ಟಿದ್ದೇವೆಂದು ಹೇಳಿದ್ದೀರಿ, ಮತ್ತೆ ಲ್ಯಾಂಡ್ ರಿಫಾರಂಸ್ ಬಗ್ಗೆ ಮಾನ್ಯ ರಾಜ್ಯಪಾಲರು ಒಂದು ಮಾತನ್ನು ಹೇಳಿದ್ದಾರೆ. ೧೯೭೬ನೇ ಡಿಸೆಂಬರ್ ಅಂತ್ಯದವರೆಗೆ ೫.೩೬ ಅರ್ಜಿಗಳು ವಿಲೇವಾರಿ ಆಗಿದ್ದರೆ ೩೧–೧೧–೧೯೭೮ರೊಳಗೆ ೮ ಲಕ್ಷ ಚಿಲ್ಲರೆ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆಂದು ಹೇಳಿದ್ದೀರಿ. ನಿಮ್ಮ ಫೈನಾನ್ಸ್ ಮಿನಿಸ್ಟರ್‌ರವರು ಹಿರಿದ್ದಾರೆ. I have to accept that he is a very intelligent man You can take it as a compliment from me. ಇಲ್ಲಿ ಬರೆದಿರುವುದನ್ನು ನೋಡಿದರೆ ೮ ಲಕ್ಷ ಅರ್ಜಿಗಳನ್ನು ವಿಲೇವಾರಿ ಮಾಡಿಬಿಟ್ಟ ಹಾಗೆ ಇದೆ. They have tried to draw a comparison between the performance of previous years with the present. ಆದರೆ ನೀವು ಬಂದ ಮೇಲೆ ವಿಲೆವಾರಿಯಾಗಿರತಕ್ಕದು ೩.೨ ಲಕ್ಷ ಮಾತ್ರ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇದರಲ್ಲಿ ಟೋಟಲ್ ಅಪ್ಲಿಕೇಷನ್‌ಗಳು ಬಂದಿದ್ದು ೮ ಲಕ್ಷದ ೧೬ ಸಾವಿರ ಚಿಲ್ಲರೆ ಅರ್ಜಿಗಳಲ್ಲಿ ೧೯೭೪ರವರೆಗೆ ಕೇವಲ ೫ ಲಕ್ಷದ ಚಿಲ್ಲರೆ ಅರ್ಜಿಗಳು ಮಾತ್ರ ಡಿಸ್ಪೋಜಲ್ ಆಗಿತ್ತು ಎಂದು ಹೇಳಲಾಗಿದೆ.

ಶ್ರೀ ಡಿ. ದೇವರಾಜ ಅರಸ್.— ಇನ್ನು ೩ ಲಕ್ಷ ಚಿಲ್ಲರೆ ಮಾತ್ರ ಉಳಿದಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ೩ ಲಕ್ಷ ಚಿಲ್ಲರೆ ಅರ್ಜಿಗಳನ್ನು ನಾವು ಕೇವಲ ಒಂದೇ ವರ್ಷದಲ್ಲಿ ಮಾಡಿ ಪೂರೈಸಿದ್ದೇವೆ ಎನ್ನುವ ಶಕ್ಯದನ್ನು ತೋರಿಸಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.— ಇನ್ನೊಂದು ಸಾರಿ ಓದಿಕೊಳ್ಳಿ ಸ್ವಾಮಿ,, ಅದರಲ್ಲಿ ಏನು ಬರೆದಿದೆಯೆಂದು. ನಿಮ್ಮ ಅಭಿಪ್ರಾಯ ಅದೇ ಆಗಿದ್ದರೂ ಬರೆಯುವ ರೀತಿಯಲ್ಲಿ ಬುದ್ಧಿವಂತಿಕೆಯನ್ನು ಉಪಯೋಗಿಸಿದ್ದಾರೆಂದು ಹೇಳುತ್ತಿದ್ದೇನೆ. ನೀವು ಮಾಡಿದ್ದೀರಿ ಇಲ್ಲವೆಂದು ಅಲ್ಲ ಅದನ್ನು ಒಪ್ಪಿಕೊಳ್ಳೋಣ ಆದರೆ ಎಷ್ಟು ಹೆಚ್ಚಿಗೆ ಟ್ರಿಬ್ಯೂನಲ್ಸ್‌ಗಳನ್ನು ಮಾಡಿದ್ದೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾಡಿದ್ದೇವೆ. ನೀವು ಸಹ ಹಿಂದೆ ಮುಖ್ಯಮಂತ್ರಿಗಳಾಗಿದ್ದಾಗ ಸೌತ್ ಕೆನರಾದಲ್ಲಿ ಒಂದೊಂದು ಕಡೆ ೪-೬ ಟ್ರಿಬ್ಯೂನಲ್‌ಗಳನ್ನು ಮಾಡಿದ್ದೀರಿ.

Sri D. Devaraj Urs.—I am not asking explanation, Let him tell me how many tribunals were increased extra. You have increased about 100 and odd Very good ೩ ಲಕ್ಷ ಚಿಲ್ಲರೆ ಅರ್ಜಿಗಳಲ್ಲಿ ಟೆನೆಂಟ್ಸ್‌ಗೆ ಹೋಗತಕ್ಕದ್ದು ೧ ಲಕ್ಷದ ೮೦ ಸಾವಿರ ಚಿಲ್ಲರೆ ಅಲ್ಲವೆ? I am not trying to find fault. ಇದರಲ್ಲಿ ತಾವು ಒಂದನ್ನು ಗಮನಿಸಬೇಕು. ನಿಮ್ಮ ಮೇಲೆ ಅವರ ಮೇಲೆ ತಪ್ಪು ಹೇಳಬೇಕೆಂದು ಹೇಳುತ್ತಿಲ್ಲ ಜನಗಳ ಹಿತದೃಷ್ಟಿಯಿಂದ ಯೋಚನೆ ಮಾಡಿ. ನೀವು ಟ್ರಿಬ್ಯೂನಲ್ಸ್‌ಗಳನ್ನು ಹೆಚ್ಚಿಗೆ ಮಾಡಿದ್ದು ಸರಿಯಿಲ್ಲವೆಂದು ಹೇಳುತ್ತಿಲ್ಲ. Alright. you have taken the trouble to increase the number of tribunals so that these cases should be disposed of at the earliest possible time. To that extent I must say that the Government has done well. While so doing. ಅತುರಗಾರನಿಗೆ ಬುದ್ಧಿ ಮಟ್ಟ ಎಂದು ಹೇಳುವ ಹಾಗೆ ಅತುರದಲ್ಲಿ ಏನು ಮಾಡಿದ್ದೀರಿ ಗೊತ್ತೆ? ಬೆಳಗಾಂ ಜಿಲ್ಲೆಯಲ್ಲಿ ಒಂದು ಕೇಸ್ ಇದೆ. ಉಗಾರ್ ಶುಗರ್ ಫ್ಯಾಕ್ಟರಿಗೆ ಸಂಬಂಧಪಟ್ಟ ೨೦೦ ಎಕರೆ ಜಮೀನು ಇದೆ. ಆದನ್ನು ಒಂದೇ ಒಂದು ದಿವಸದಲ್ಲಿ ೩೦೦ ಅರ್ಜಿಗಳನ್ನು ಟ್ರಿಬ್ಯೂನಲ್‌ರವರು ಇತ್ಯರ್ಥ ಮಾಡುವುದಕ್ಕೆ ಆಗುತ್ತದೆಯೇ? ಲ್ಯಾಂಡ್ ಟ್ರಿಬ್ಯೂನಲ್ಸ್‌ನವರು ಲ್ಯಾಂಡ್ ರಿಫಾರಂಸ್ ಆಕ್ಟ್ ಪ್ರಕಾರ ಏನು ಮಾಡಬೇಕು. ಎಲ್ಲಿ ತಕರಾರು ಇರುತ್ತದೆಯೋ ಅಂಥಾ ಕಡೆಗಳಲ್ಲಿ ಸ್ಥಳಕ್ಕೆ ಹೋಗಿ ನೋಡಿಯೆ ತೀರ್ಮಾನ ಕೊಡಬೇಕು.

ಅದನ್ನು ಬಿಟ್ಟು ಹೊಸದಾಗಿ ಟೆನೆಂಟ್ಸ್‌ಗಳನ್ನು ಸೃಷ್ಟಿ ಮಾಡಿ ರಾತ್ರೋ ರಾತ್ರಿ ಬಂದಂಥ ೨೫೦ ಅರ್ಜಿಗಳನ್ನು ವಿಲೇವಾರಿ ಮಾಡಿಬಿಟ್ಟು, ಆರ್ಡರ್ ಹೊರಡಿಸಿದ್ದಾರೆ. ಇದರ ಬಗ್ಗೆ ಅಲ್ಲಿಯವರು ಡೆಪ್ಯೂಟಿ ಕಮೀಷನರ್‌ರವರಿಗೆ ಮನವಿ ಸಲ್ಲಿಸಿದ್ದಾರೆ, ಸರ್ಕಾರಕ್ಕೆ ಮನವಿ ಬಂದಿದೆ, ಇದು ಗೊತ್ತಿದ್ದರೂ ಕೂಡ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಎನ್‌ಕ್ವೈರಿ ಮಾಡಿ.

ಶ್ರೀ ಡಿ. ದೇವರಾಜ ಅರಸ್.— ಇದರಲ್ಲಿ ಒಬ್ಬರು ಮಂತ್ರಿಗಳು ಇನ್‌ವಾಲ್ವ್ ಆಗಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಅಥಣಿ ತಾಲ್ಲೂಕಿನ, ಯುಗಾರ್ ಶುಗರ್ ಫ್ಯಾಕ್ಟರಿ ಜಮೀನಿನ ಬಗ್ಗೆ ನಮಗೆ ಕಂಪ್ಲೇಂಟ್ ಬಂತು, ಬಂದ ತಕ್ಷಣವೇ ನಾವು ಸ್ಪೆಷಲ್ ಡೆಪ್ಯೂಟಿ ಕಮೀಷನರ್‌ರವರಿಗೆ ತಿಳಿಸಿದ್ದೇವೆ ಅವರು ಇನ್‌ವೆಸ್ಟಿಗೇಷನ್ ಮಾಡಿ ಅವನ್ನು ಈಗಾಗಲೇ ಸೀಜ್ ಮಾಡಿದ್ದಾರೆ. ಆ ಜಮೀನನ್ನು ಬಡವರಿಗೇ ಹಂಚಬೇಕು ಎನ್ನತಕ್ಕ ತೀರ್ಮಾನವನ್ನು ಸಹ ತೆಗೆದುಕೊಂಡಿದ್ದೇವೆ.

SRI D. DEVARAJ URS.— I must thank the Revenue Minister. He has taken action. But I am drawing the attention of not only his but also the whole Government that a Minister is responsible for this undoing, for taking away the rights of the original tenants and creating fack tenants who are his chelas or who are his men.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಸಂಬಂಧಪಟ್ಟ ಮಂತ್ರಿಗಳು ನಮಗೆ ಕಾಗದ ಬರೆದಿದ್ದಾರು. ಆ ರೀತಿಯಾಗಿ ಅಲ್ಲಿ ಅನ್ಯಾಯ ನಡೆದಿದೆಂದು ನಮಗೆ ಕಂಡು ಬಂದಿದರಿಂದಲೇ ನಾವು ಸ್ಪೆಷಲ್ ಡೆಪ್ಯೂಟಿ ಕಮಿಷನರ್‌ರವರಿಗೆ ಥರೋ ಎನ್‌ಕ್ವೈರಿ ಮಾಡಿಸಿ ಯಾವ ರೀತಿಯಾಗಿ ಮಾಡಬೇಕು ಎನ್ನುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಿದ್ದೇವೆ, ಸುಮ್ಮನೆ ಪಾಪ ಅವರು ಇವತ್ತಿನ ದಿವಸ ಇಲ್ಲಿಲ್ಲ ಎಂದು ಅವರ ಮೇಲೆ ಹೇಳಿದರೆ ತಪ್ಪಾಗುತ್ತದೆ.

ಶ್ರೀ ಜಿ. ಎಚ್. ಪಟೇಲ್.— ಅವರು ಯಾರು ಹೆಸರು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಯಾರಿದ್ದಾರೋ ಅಲ್ಲಿಗೆ ಬಿಡಿ.

ಶ್ರೀ ಡಿ. ದೇವರಾಜ ಅರಸ್.—ಹೀಗೆ ಇದು ಅನೇಕ ಸಂದರ್ಭಗಳಲ್ಲಿ ಲ್ಯಾಂಡ್‌ಟ್ರಿಬ್ಯೂನಲ್‌ಗಳಲ್ಲಿ ಆತುರವಾಗಿ ಮಾಡಿ ಸ್ಥಳವನ್ನೇ ನೋಡಿರುವುದಿಲ್ಲ, ಲ್ಯಾಂಡ್ ಟ್ರಿಬ್ಯೂನಲ್‌ನವರು ಲಂಚ ತೆಗೆದುಕೊಂಡು ಮಾಡಿ ಬಿಟ್ಟಿರುತ್ತಾರೆ. ಹಿಂದೆ ಏನು ಲಂಚ ತೆಗೆದುಕೊಳ್ಳುತ್ತಿರಲಿಲ್ಲ ಈಗ ಮಾತ್ರ ಜಾಸ್ತಿ ತೆಗೆದುಕೊಳ್ಳುತ್ತಿದ್ದಾರೆಂದು ನಾನು ಆ ವಿಷಯದ ಬಗ್ಗೆ ಹೇಳುತ್ತಿಲ್ಲ. ಲಂಚ ತೆಗೆದುಕೊಂಡಿರಲಿ ಏನೇ ಇರಲಿ, ನೂರು ಕೇಸ್‌ಗಳಲ್ಲಿ ಹತ್ತು ಕೇಸ್‌ಗಳೂ ಸರಿಯಾದ ಮಾಹಿತಿ ದೊರೆಯದೇ ಇದ್ದಾಗ ಅನೇಕ ಸಂದರ್ಭಗಳಲ್ಲಿ ಅನ್ಯಾಯವಾಗಿರಬಹುದು. ಇದರಿಂದ ರಿಯಲ್ ಟೆನೆಂಟ್ಸ್ ಫಾಯಿದೆ ಪಡೆಯದೆ ಲ್ಯಾಂಡ್ ಲಾರ್ಡ್ಸ್ ಫಾಯಿದೆ ಹೊಡೆದಿರುತ್ತಾರೆ, ಇಲ್ಲ ಮಧ್ಯಸ್ಥದಾರರು ಫಾಯಿದೆ ಹೊಡೆದಿರುತ್ತಾರೆ. ಆದುದರಿಂದ ಇಂಥಾ ವಿಚಾರವನ್ನು ತಾವು ಗಮನಿಸಬೇಕೆಂದು ಇಷ್ಟು ಹೇಳಿ ಇನ್ನು ಬೆಲೆಗಳು ವಿಪರೀತವಾಗಿ ಗಗನಕ್ಕೇರುತ್ತಿವೆ. ಈ ವರ್ಷ ಬೆಲೆಗಳನ್ನು ಸ್ಟೆಬಲೈಜ್ ಮಾಡಿದ್ದೇವೆಂದು ಹೇಳಿದ್ದಾರೆ ನಿಜ. ಸ್ಟೆಬಲೈಜ್ ಏನಾಗಿದೆ ಎಂದರೆ ಸಧಾರಣ ಅಕ್ಕಿ ೪.೫೦ಕ್ಕೆ ಸ್ಟೆಬಲೈಜ್ ಆಗಿದೆ. ರಾಗಿ ೨-೨೫ ಪೈಸೆಗಳಿಗೆ ಸ್ಟೆಬಲೈಜ್ ಆಗಿದೆ. ಸಿಮೆಂಟ್ ೩೮ ರೂ ಗಳಿಗೆ ಸ್ಟೆಬಲೈಜ್ ಆಗಿದೆ. ಬ್ಲಾಕ್ ಮಾರ್ಕೆಟ್ ಪ್ರೈಜ್ ೬೦-೭೦ ರೂ.ಗಳಿಗೆ ಸ್ಟೆಬಲೈಜ್ ಆಗಿದೆ ಎಂದು ಮಾನ್ಯ ಅರ್ಥ ಮಂತ್ರಿಗಳು ಹೇಳುತ್ತಿದ್ದಾರೆ. ನಮ್ಮ ಸರ್ಕಾರದವರ ಪರ್‌ಫಾರ್‌ಮೆನ್ಸ್ ಎಷ್ಟರ ಮಟ್ಟಿಗೆ ಇದೆ ಎನ್ನುವ ಬಗ್ಗೆ ಹೇಳುವುದಾದರೆ, ಇದರಲ್ಲಿ ಹೋದ ವರ್ಷನೇ ನಾನು ಪಾಯಿಂಟ್‌ಔಟ್ ಮಾಡಿದ್ದೆ. ಈಗಲೂ ಅದನ್ನೆ ಹೇಳುತ್ತೇನೆ. ಅದು ಏನೆಂದರೆ ಸೆಲೆಕ್ಟೆಡ್ ಎಕಾನಮಿ ಇಂಡಿಕೇಟರ್ಸ್ ಸರ್ವೆ ೧೯೮೦-೮೧ರ ೪ನೇ ಪೇಜ್ ಇದರಲ್ಲಿ ಹೇಳಿದ್ದಾರೆ, net domestic product in crores... . ತೆಗೆದುಕೊಂಡರೆ, ೧೯೮೦-೮೧ರಲ್ಲಿ anticipated acheivement 5,630 crores. In terms of Rupees, ತೆಗೆದುಕೊಂಡರೆ, at constant price ೧೯೭೦-೭೧ ರಲ್ಲಿ ೨,೪೧೨ ಕೋಟಿ ಇತ್ತು, ೧೯೮೦-೮೧ರಲ್ಲಿ ೩೩೦೪ಕ್ಕೆ ಇಳಿಯಿತು ೧೯೮೧-೮೨ರಲ್ಲಿ ೨,೪೨೦ಕ್ಕೆ ಏರಿದೆ,

೧೯೭೯–೮೦ರಲ್ಲಿ ೨೪೧೬ ಕೋಟಿ ಇತ್ತು. ೧೯೮೦–೮೧ರಲ್ಲಿ ೨೩೦೪ ಕೋಟಿಗೆ ಇಳಿಯಿತು. ೧೯೮೧–೮೨ಕ್ಕೆ ೨೪೧೨ ಕೋಟಿಗೆ ಏರಿದೆ. They have not been able to reach 1979-80 level in these two years. Whatever you might say your figures show that your domestic product at constant price of 1980-81 has not been able to come up to the level of 1979–80. ಇದು ಪ್ರಾಡೆಕ್ಟ್ ವಿಚಾರವಾದರೆ, ಇನ್ನು ತಲಾ ವಾರ್ಷಿಕ ವರಮಾನವನ್ನು ನೋಡೋಣ. ೧೯೭೯–೮೦ರಲ್ಲಿ ೬೯೬ ರೂಪಾಯಿ, ೧೯೮೦–೮೧ರಲ್ಲಿ ೬೫೨ ರೂಪಾಯಿ ಮತ್ತು ೧೯೮೧–೮೨ರಲ್ಲಿ ೬೭೦ ರೂಪಾಯಿ ಇತ್ತು. In these two yeariwant to point out to the Government and the Finance Minister in particular that all your achievement which you wantto make to the people are very good. But, this is the achievement here. You are not able to reach what is called the per capita income of 1979–80 level even now. ಅದಕ್ಕೆ ಕಾರಣ, ಅದು ಇದೆ, ಇದು ಇದೆ, ಎಂಬ ವಿಚಾರ ಬೇರೆ. ಅಂತೂ ನೀವು ನಿಮ್ಮ ಗುರಿಯನ್ನು ಮುಟ್ಟಿಲ್ಲ ಎಂಬುದನ್ನು ನಿಮ್ಮ ಅಂಕಿ ಅಂಶಗಳೇ ತೋರಿಸುತ್ತವೆ. ಒಂದು ಕಡೆ ಪರ್‌ಫಾರ್ಮೆನ್ಸ್ ಬಡ್ಜೆಟ್‌ನ್ನು ನೋಡಿದರೂ ಹೀಗೆ ಇದೆ, ಮತ್ತೊಂದು ಕಡೆ ಇಕನಾಮಿಕ್ ಸರ್ವೆಯನ್ನು ತೆಗೆದುಕೊಂಡರೂ ಹೀಗೆ ಇದೆ. ಆದರೂ ನಾವು ಚೆನ್ನಾಗಿ ಮಾಡಿದ್ದೇವೆಂದು ಹೇಳುತ್ತೀರಿ. ಈ ಬಡ್ಜೆಟ್‌ನ್ನು ಓದಿದವರು ಕೂಡ ಹೇಳಿದರು ಬಹಳ ಚೆನ್ನಾಗಿ ಮಾಡಿದ್ದಾರೆ ಎಂದು. ಬಹಳ ಚೆನ್ನಾಗಿ ಮಾಡಿದ್ದಾರೆ! ನಾವು ಯಕ್ಷಗಾನ ನೋಡುತ್ತೇವಲ್ಲ ಹಾಗೆ. ಯಕ್ಷಗಾನ ನೋಡಿ ಕುಣಿಸಿರಬೇಕು ಎಂದು ಕಾಣಿಸುತ್ತದೆ. ಯಕ್ಷಗಾನದಲ್ಲಿ ರಾಜ–ರಾಣಿ–ಮಂತ್ರಿ ಕಥೆ ಬಂದ ಹಾಗೆ ಆಗಿದೆ. ಯಕ್ಷಗಾನದಲ್ಲಿ ಬಳಸತಕ್ಕ ಒಡವೆಗಳು ದೂರದಿಂದ ನೋಡಲು ಮನಸ್ಸಿಗೆ ಬಹಳ ಆಹ್ಲಾದಕರವಾಗಿ ಕಾಣುತ್ತದೆ. ಸ್ಟೇಜಿನಲ್ಲಿ ಎಷ್ಟುದ್ದ ಇದ್ದಾನಪ್ಪ ಅನ್ನುವ ಹಾಗೆ ಕಾಣುತ್ತಾರೆ ಮತ್ತು ಬಹಳ ಚೆನ್ನಾಗಿರುತ್ತಾರೆ, ಆದರೆ ಬಟ್ಟೆ ತೆಗೆದರೆ ಕಾಣುವುದು ಇಷ್ಟೇ ಉದ್ದ. ಅದೇ ರೀತಿ, ಈ ಆಯವ್ಯಯದಲ್ಲೂ ಕೂಡ ಯಕ್ಷಗಾನದಲ್ಲಿ ಪಾತ್ರಧಾರಿಗೆ ಬಟ್ಟೆ ಕಿರೀಟ ಹಾಕಿ ನಿಲ್ಲಿಸಿ ಕುಣಿಸಿದ ಹಾಗೆ ಕಾಣಿಸಿದ್ದಾರೆ. ಇದರಲ್ಲಿ ಇವರು ಬಹಳ ಪ್ರವೀಣರಿದ್ದಾರೆ. ಇದನ್ನೆಲ್ಲಾ ಕಳೆದರೆ ಕೊನೆಗ ಉಳಿಯುವುದು ಇಷ್ಟೇ ಉದ್ದ. I am bound to pay compliment. I do pay comyliments, because you have dressed up nicely.

ಇದು ಇನ್ನೊಬ್ಬರಿಗೆ ಸುಲಭವಾಗಿ ಅರ್ಥವಾಗುವುದಿಲ್ಲ. ನೀವೆಲ್ಲ ಪೌಡೇನೋ ಅನ್ನುತ್ತೀರಿ. ಒಳಹೊಕ್ಕಿ ನೋಡಿದರೆ ಗೊತ್ತಾಗುತ್ತದೆ. ಎಲ್ಲೆಲ್ಲಿ ಏನೇನಾಗಿದೆ ಎಂಬುದು ನಿಮ್ಮ ಈ ಫರ್–ಫಾರ್ಮೆನ್ಸ್ ಬಡ್ಜೆಟ್‌ನಲ್ಲಿ ಈ ಒಂದು ಉದಾಹರಣೆಯನ್ನು ತೋರಿಸಿದೆ ಇಂಥ ಉದಾಹರಣೆಗಳು ಇನ್ನೂ ಬೇಕಾದಷ್ಟು ಇವೆ.

ಇನ್ನು ನೀರಾವರಿಯನ್ನು ತೆಗೆದುಕೊಳ್ಳುವುದಾದರೆ, ಇದು ಬಹಳ ಪ್ರಾಮುಖ್ಯವಾದುದು. ಮೊದಲೇ ಹೇಳಿದೆ both power and irrigation are core of the plan ಎಂದು. ಆ ಕಾರಣದಿಂದ ಅವನ್ನು ತೆಗೆದುಕೊಂಡು ಮಾತನಾಡಬೇಕಾಗಿದೆ. ನಾನು ಈ ಸಂದರ್ಭದಲ್ಲಿ ೪–೫ ಪ್ರಾಜೆಕ್ಟ್‌ಗಳನ್ನು ಮಾತ್ರ ತೆಗೆದುಕೊಂಡು ಹೇಳುತ್ತೇನೆ. ಅಂದರೆ, ಅಪ್ಪರ್ ಕೃಷ್ಣ, ಮಲಪ್ರಭ, ಘಟಪ್ರಭ, ಹೇಮಾವತಿ ಮತ್ತು ಹಾರಂಗಿ ಇವುಗಳ ಬಗೆ ಮಾತ್ರ ಮಾತನಾಡುತ್ತೇನೆ. ೫ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗಾಗಿ ಇನ್‌ವೆಸ್ಟ್‌ಮೆಂಟ್ ಮಾಡಿರತಕ್ಕದ್ದು ೩೮೭.೪೦ ಕೋಟಿ ರೂಪಾಯಿಗಳು ಮತ್ತು ಸಣ್ಣ ನೀರಾವರಿ ಯೋಜನೆಗಾಗಿ ಖರ್ಚು ಮಾಡಿರತಕದ್ದು ೬೭ ಕೋಟಿ ರೂಪಾಯಿಗಳು. ಒಟ್ಟು ೪೫೪ ಕೋಟಿ ರೂಪಾಯಿಗಳು ಖರ್ಚಾದ ಹಾಗೆ ಆಯಿತು. ಈ ೫ನೇ ಪಂಚ ವಾರ್ಷಿಕ ಯೋಜನೆಯಲ್ಲಿ ನೀರಾವರಿಯಾಗಿರತಕ್ಕ ಪ್ರದೇಶ ೫.೧೧ ಲಕ್ಷ ಹೆಕ್ಟೇರುಗಳು. ಅಂದರೆ ೮೯ ೧/೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಒಂದು ಲಕ್ಷ ಹೆಕ್ಟೇರು ಭೂಮಿಗೆ ನೀರಾವರಿ ವ್ಯವಸ್ಥೆಯಾಗುತ್ತದೆ. ೧೯೭೪ ರಿಂದ ೧೯೭೯ರ ವರೆಗೆ ೫ನೇ ಪಂಚ ವಾರ್ಷಿಕ ಯೋಜನೆಯಾದರೆ ೧೯೮೦ನೇ ಏಪ್ರಿಲ್‌ಗೆ ನಿಮ್ಮ ೬ನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುತ್ತದೆ. ಅದರಲ್ಲಿ ಅಂದರೆ ೧೯೮೦–೮೧ನೇ ಸಾಲಿನಲ್ಲಿ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಾಗಿ ೯೯ ೧/೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಅದೇ ರೀತಿ, ಸಣ್ಣ ನೀರಾವರಿ ಯೋಜನೆಗಾಗಿ ೧೨ ೧/೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಅಂದರೆ

ಒಟ್ಟು ೧೧೪ ಕೋಟಿ ರೂಪಾಯಿಗಳು ಖರ್ಚಾದ ಹಾಗೆ ಆಯಿತು. ಇದರಿಂದ, ಹೊಸದಾಗಿ ೦.೫೪ ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯಾಗಿದೆ. ನೀವು ೧೧೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕೇವಲ ೫೪ ಸಾವಿರ ಹೆಕ್ಟೇರ್ ಪ್ರದೇ ಶಕ್ಕೆ ನೀರಾವರಿಯಾಗಿದೆ ಎಂದು ಹೇಳುತ್ತಿದ್ದೀರಿ. ನಿಮ್ಮ ಲೆಕ್ಕದ ಪ್ರಕಾರ ಒಂದು ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯಾಗಬೇಕೆಂದರೆ ಇನ್ನೂ ೧೧೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಇದು ನಾನು ಹೇಳುವುದು. ಅವರು ಬೇಕಾದರೆ ಬದಲಾಯಿಸಿ ಹೇಳುವುದಾದರೆ ಹೇಳಲಿ. 54,000 hectares were brought under irrigation. He has got all his facts and figures. I do not say entirely it is because of lack of performance. It is less of performance with more of money. Why ? It is because of escalation of prices. That is one. To what extent the Department is to be held responsible is another question you have to look into. I am not talking this with a view to simply criticise. Please understand that this is for escalation of prices. It is merely because of escalation of prices. If you could not perform better or is it something else that is the matter that the Government is to very carefully go into. What was possible for Rs. 87 crores for lakh hectares to be brought under cultivation; you have spent Rs. 211 crores and you may be getting only 1 lakh hectares.

ಘಟಪ್ರಭ ಮತ್ತು ಮಲಪ್ರಭ ಯೋಜನೆಗಳು ಮೊದಲೇ ಪೂರ್ಣವಾಗಿದ್ದವು. ೧೯೮೦ರ ಕೊನೆಯಲ್ಲಿ ಹೇಮಾವತಿ ಪೂರ್ಣವಾಯಿತು, ಹಾರಂಗಿ ಯೋಜನೆ ಕೂಡ ಆಗಿತ್ತು. ಕಬಿನಿಯಂತು ಮೊದಲೇ ಆಗಿತ್ತು. ಸಾಮಾನ್ಯವಾಗಿ, ಎಲ್ಲ ಡ್ಯಾಂಗಳು ಕಂಪ್ಲೀಟ್ ಆಗಿವೆ. ಛಾನಲ್ಸ್ ಅವು-ಇವು ಮಾಡತಕ್ಕ ಕೆಲಸ ಇದೆ. ಅಪ್ಪರ್ ಕೃಷ್ಣದ್ದು ಮಾತ್ರ ಇನ್ನೂ ಕೆಲಸ ಆಗುತ್ತಿದೆ. ನಾರಾಯಣಪುರದ ಡ್ಯಾಂ ಪೂರ್ಣವಾಗಿಲ್ಲ. ಪರ್‌ಫಾರ್ಮೆನ್ಸ್ ಬಡ್ಜೆಟ್ ಬಂದಿದ್ದರೆ ಎಲ್ಲ ಚನ್ನಾಗಿ ಗೊತ್ತಾಗುತ್ತಿತ್ತು. ಡ್ಯಾಂಗಳು ಪೂರ್ಣವಾಗಿ ಛಾನಲ್‌ಗಳನ್ನು ಮಾಡುವಾಗ, ಆ ಕಡೆ ಸರ್ಕಾರ ಹೆಚ್ಚಿನ ಗಮನ ಕೊಡಬೇಕಾಗುತ್ತದೆ, ಆ ಮೇಲೆ ಆಯುವ್ಯಯ ಭಾಷಣದ ೧೩ನೇ ಪುಟದಲ್ಲಿ ಈ ರೀತಿ ಹೇಳಿದ್ದಾರೆ.

" During 1980-81 53, 935 Hectares have been brought under irrigation, through minor, medium and major irrigation. During 1981-82 we expect to bring one lakh hectares. " I want to know whether, as the Finance Minister he is sure that he is going to bring one lakh hectares under irrigation in 1981-82. I will leave the question at that stage. I say that you have not achied that target at all. At one stage you have made in the Governor's speech that roughly 80, 000 Hectares are going to be brought under cultivation. ಮಾನ್ಯ ರಾಜ್ಯಪಾಲರ ಭಾಷಣದಲ್ಲೂ ಇದೇ ಇದೆ, ರಾಜ್ಯಪಾಲರ ಭಾಷಣದ ೬ನೇ ಪ್ಯಾರಾದಲ್ಲಿ "ಈ ವರೆಗೆ ನೀರಾವರಿ ಸೌಲಭ್ಯವಿಲ್ಲದ ಪ್ರದೇಶಗಳಿಗೆ ೬ನೇ ಯೋಜನೆಯ ಅವಧಿಯಲ್ಲಿ ನೀರಾವರಿ ಸೌಕರ್ಯವನ್ನೊದಗಿಸುವ ಯೋಜನೆಯಿದೆ. ೧೯೮೧ರ ಜೂನ್ ಕೊನೆಯವರೆಗೆ ೨೨.೯೪ ಲಕ್ಷ ಹೆಕ್ಟೇರು ಪ್ರದೇಶಕ್ಕೆ ನೀರಾವರಿ ಸೌಕರ್ಯವನ್ನೊದಗಿಸಲಾಗಿತ್ತು. ಪ್ರಸಕ್ತ ವರ್ಷ ಇನ್ನೂ ೮೧ ಸಾವಿರ ಹೆಕ್ಟೇರುಗಳಷ್ಟು ಪ್ರದೇಶಕ್ಕೆ ನೀರಾವರಿ ಸೌಕರ್ಯವನೊದಗಿಸಲಾಗುವುದು " ಎಂದು ಹೇಳಿದ್ದಾರೆ. ೧೯೮೨-೮೩ರ ಅವಧಿಯಲ್ಲಿ ಈ ವಿಸ್ತೀರ್ಣ ವನ್ನು ೧ ಲಕ್ಷ ಹೆಕ್ಟೇರು ಪ್ರದೇಶದಷ್ಟಕ್ಕೆ ಹೆಚ್ಚಿಸುವ ಪ್ರಸ್ತಾಪವಿದೆ " ಎಂದೂ ಹೇಳಿದ್ದಾರೆ.

SRI M. VEERAPPA MOILY.— We are conscious of that figure and this figure. It is only after proper calculation that We have put it.

SRI D. DEVARAJ URS.— Your calculation is not uptill now. I want to point out your impounding of water in Upper Krishna Project itself will be in the month of June, according to your own statement. During 1982-83, you have said, in all you are expected to bring 20·000 hectares under irrigation with an outlay of Rs 139.93 crores. I wart to ask the Hon. Minister a straight question, whether he has been able to impound water in Almatti, or Narayanapur Dam. If he says yes, then how much in Almatti ? ಅದರ ಮೇಲೆ ನಿಮ್ಮ ಪರ್ಫಾರ್ಮೆನ್ಸ್ ಅವಲಂಬಿತವಾಗುತ್ತದೆ. Because you have taken into calculation certain area of irrigation under U. K. P. Otherwise how do you reach this one lakh ?

SRI M. VEERAPPA MOILY .— I will be in a position to justify while I start giving the reply.

(MR. SPEAKER In the Chair)

SRI D, DEVARAJ URS.— If you are in a position to justify, I will be happy. But if you are not in a position to impound water you will not be in a position to get that much. That is very definite. According to your irrigation reports, target for 1981-82 was 70.344 hectares. But you could not reach it last year. In 1981-82 you have reached only 54,000 hectares. I am talking of only major irrigation. You expected 35,000 hectares from U. K. P. It is there in your record. That 35,000 hectares is yet to come. The water in U. K. P. is going to be impounded only in the month of June/July. That is why I am asking whether the impounding of water has taken place or it is going to take place in the month of June or July. So against the target of 70,343 hectares. you are able to achieve just about 35.344 hectares. This is where the snag lies. This is according to your own figures. ೧೯೮೧ ರ ಸರ್ಕಾರಿ ವರದಿಯಲ್ಲಿ ನೀವು ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ೩೫,೦೦೦ ಸಾವಿರ ಎಕರೆಗೆ ಟಾರ್ಜೆಟ್ ಇಟ್ಟುಕೊಂಡಿದ್ದೀರಿ. ಅದು ೧೪ ಸಾವಿರಕ್ಕೆ ಇಳಿದಿದೆ. If you disprove it, I will be very happy. Except Malaprabha project where you have targetted for 10,000 hectares, you have increased it to 12,880 hectares. Under Hemavathy project your tagets was 4,500 hectares and you have gone up to 9,000 and odd hectares. In every other project, i. e., Ghataprabha Bhadra, Harangi, Kabini Theetha, Saudagar, Tharaka, Manchanabele, you have reduced the target. you have not been able to achieve the targets that you have fixed. This is according to your own figures. ಇದಿಷ್ಟಾಯಿತು. ಕೃಷ್ಣಾ ಮೇಲ್ದಂಡೆ ಯೋಜನೆಗೆ ೧೯೭೭ರ ಅಂದಾಜಿನ ಪ್ರಕಾರ ಎಷ್ಟು ಹಣ ಖರ್ಚಾಗುತ್ತಿತ್ತು. ಈಗ ಎಷ್ಟಾಗುತ್ತದೆ ಎಂಬುದನ್ನು ನೋಡಬೇಕಾದುದು ಬಹಳ ಮುಖ್ಯ. ಆಗ ೨೮೩ ಕೋಟಿ ಅಥವಾ ೨೮[illegible] ಕೋಟಿ ರೂಪಾಯಿಗಳನ್ನು ಅಂದಾಜು ಮಾಡಲಾಗಿತ್ತು. ಇದುವರೆಗೂ ಆ ಅಂದಾಜನ್ನು ರಿವೈಸ್ ಮಾಡಿಲ್ಲ. ೧೯೭೭ನೇ ಇಸವಿಯಲ್ಲಿ ಏನು ಅಂದಾಜು ಮಾಡಿದ್ದರೋ ಅದು ೧೯೮೨ನೇ ಇಸವಿಯಾದರೂ ರಿವೈಸ್ ಆಗದೇ ಹಾಗೆಯೇ ಉಳಿದುಕೊಂಡಿದೆ. ಇದರಿಂದ ಏನಾಗುತ್ತಿದೆಯೆಂದರೆ. when you

don't revise,you don't have the correct picture of what will be the probable amount that you require to comple the project. ಸುಮ್ಮನೆ ಹೇಳಿ ಕೊಂಡುಹೋಗುತ್ತಿದ್ದಾರೆಯೋ ಹೊರತು ಸರ್ಕಾರದವರು ಇವಕ್ಕೆ ಗಮನ ಕೊಟ್ಟಿಲ್ಲ. ೨೮೪ ಕೋಟಿ ರೂಪಾಯಿ ಆಗಿದೆ ಅಂದಾಜಿದ್ದರೆ ೧೫ ಪರ್ಸೆಂಟ್ ಇನ್‌ಫ್ಲೇಷನ್ ಇರುತ್ತದೆ. Every year we have to go on adding 15% on an average in tht Public Works Department. they are bound to take 10% for inflation every year. 15 ಪರ್ಸೆಂಟ್ ಏತಕ್ಕೆ ಹೇಳುತ್ತಿದ್ದೇನೆಂದರೆ escalation ಜಾಸ್ತಿಯಾಗುತ್ತದೆ. ಹಾಗೆ ಲೆಕ್ಕ ಹಾಕಿ ಕೊಂಡು ನೋಡಿದರೆ ಶೇಕಡ ೯೦ ರಷ್ಟು ಹೆಚ್ಚು ಹಣ ಬೇಕಾಗುತ್ತದೆ. ಅಂದರೆ ೧೯೭೭ ರಿಂದ ೧೯೮೨ರ ವರೆಗೆ ೨೫೫ ಕೋಟಿ ಜಾಸ್ತಿ ಬೇಕಾಗುತ್ತದೆ. ಆಗ ೧೯೮೨ನೇ ಇಸವಿಗೆ ೫೩೮ ಕೋಟಿ ರೂಪಾಯಿಗಳಾ ಗುತ್ತವೆ. ಇದು ವರೆಗೂ ೧೯೫ ಕೋಟಿ ಖರ್ಚು ರೂಪಾಯಿ ಮಾಡಿದ್ದಾರೆ. ಈಸಾರಿ ಸುಮಾರು ೬೦ ಕೋಟಿ ರೂಪಾಯಿ ಹಾಕಿಕೊಂಡಿದ್ದಾರೆ. ೫೩ ಕೋಟಿ ರೂಪಾಯಿ ಹಾಕಿರಬಹುದು. ೫೩ ಹಾಕಿಕೊಂಡರೆ ಇನ್ನೂ ೩೪೩ ಕೋಟಿ ಉಳಿದುಕೊಂಡಿತು. ಈ ಯೋಜನೆ ಮುಗಿಸುವುದಕ್ಕೆ ಇನ್ನೂ ೭ ವರ್ಷ ಆಗುತ್ತದೆ. ಹಿಂದೆ ೧೯೭೭ರಲ್ಲಿ ಸಿಮೆಂಟ್ ಬೆಲೆ, ಕಬ್ಬಿಣದ ಬೆಲೆ ಎಷ್ಟಿತ್ತು ಈಗ ಎಷ್ಟಾಗಿದೆ, ಮುಂದೆ ಎಷ್ಟಾಗುತ್ತದೆ ಎಂಬುದನ್ನು ನೋಡಿ ಲೆಕ್ಕ ಹಾಕಿಕೊಳ್ಳಬೇಕು. ಆಗ ೨೮ ರೂಪಾಯಿ ಒಂದು ಮೂಟೆ ಸಿಮೆಂಟಿಗಿದ್ದರೆ ಈಗ ೩೮ ರೂಪಾಯಿ ಆಗಿದೆ. ಕಬ್ಬಿಣದ ಬೆಲೆಯೂ ಜಾಸ್ತಿಯಾಗಿದೆ. ಎಲ್ಲಾ ಸಾಮಾನಿನ ಬೆಲೆ ಹೆಚ್ಚಾಗಿದ್ದು ಎಲ್ಲಾ ಖರ್ಚನ್ನೂ ಗಮನಕ್ಕೆ ತೆಗೆದುಕೊಂಡರೆ ೮೯೮ ಕೋಟಿಗೆ ಬರುತ್ತದೆ.

೧.೩೦ ಪಿ.ಎಂ.

ಶ್ರೀ ಡಿ. ದೇವರಾಜ ಅರಸ್.—ಅಪ್ಪರ್ ಕೃಷ್ಣ ಪ್ರಾಜೆಕ್ಟನ್ನು ತಾವು ಜೂನ್ ೮೩ ರೊಳಗೆ ಕಟ್ಟಿ ಮುಗಿಸುತ್ತೀರಾ ಅಷ್ಟರೊಳಗೆ ತಾವು ಅದರ ಕೆಲಸವನ್ನು ಪೂರೈಸಿದರೆ ನಾನು ಶರಣಾಗಿಬಿಟ್ಟು ಈ ರಾಜ್ಯ ಬಿಟ್ಟು ಹೋಗುತ್ತೇನೆ.

ಅಧ್ಯಕ್ಷರು.—ತಮಗೆ ಇನ್ನೂ ಎಷ್ಟು ವೇಳೆ ಬೇಕು?

ಶ್ರೀ ಡಿ. ದೇವರಾಜ ಅರಸ್.—ಇನ್ನು ಮೂರು ನಾಲ್ಕು ವಿಷಯಗಳು ಇವೆ. ಇನ್ನು ಅರ್ಧ ಗಂಟೆಯೊಳಗೆ ನನ್ನ ಭಾಷಣವನ್ನು ಮುಗಿಸುತ್ತೇನೆ. I am not repeating anything. I will conclude my speech within the time you would ask me. I am not going to insist upon for more time than that.

MR. SPEAKER.—Please try to conclude within 15 minutes.

SRI D. DEVARAJ URS.—Sir, I am just pointing out what will be the escalation cost and how much money we are providing, how it is difficult at this rate not one project will be completed in the coming 7–8 years That is what I want to prove by analysing the work done in each of the projects, and what is the remedy for it? It is for the Government to take note of what I say. whether they hear me or not is a different matter altogether. Now in Malaprabha Project potential to be created is 2 lakh hectares. Potential created (i) to end of June 1980 1.06 lakh hectares (ii) to end of June 1981 1.16 lakh hectares. Total cost of the Project is Rs. 162 crores at the price index not known. Expenditure of this project upto the end of March 1981 is about Rs. 114 crores and the budget grant for the year 1981–82 is Rs. 10 crores. Balance work is Rs. 38 crores. Now, the Government has decided to give Rs. 10 crores annually to complete this project. That

means to say they require 4 years to complete this. Then, in your report you have said Irrigated and Irrigable area. are same Irrigabl area means the potential to be created. Irrigated means actually irrigated. How could both be same? By mistake it might have been shown. We are interested to know how much area has been irrigated. So, in the report you have wrongly mentioned them as irrigable area. It cannot be irrigable area Irrigated must be something less. Who is responsible for this? This is how sometimes department also mislead. Therefore, Sir, potential created is 1.16 lakh hectares in 1980. So, another 1 lakh hectares of potential still remains to be created in Malaprabha. What are you going to do? Again without taking price escalation into account if you take up the project it will go upto Rs. 50 crores. So, if you are in a position to creat 1 lakh hectares by the end of 3-4 years, the whole area will be under irrigation. Otherwise it will not be possible to achieve the targeted areas.

Then, I come to Ghataprabha Project. Cost of the project is—Rs 158 crores roughly. Potential created (i) To end of June 1980-1.43 lakh hectares. It is same in 1981 also. Then it is said all the works in Hidkal Dam has been completed. Secondly, they say left bank canal has been completed in its entire length. Yes, I agree it has been completed. Then, you come to Right Bank. Unless you complete the Right Bank Canal where I think you have to tackle more than one tunnel which are said to be most important work you will not be able to complete this work within the stipulated period nor the amount we are now providing is sufficient to complete this because escalation will have to be taken into account the escalation would be not less than 15% at any rate per year. And then having spent nearly Rs. 5 crores I think you have been able to create potential to the extent of about 4,000 and odd hectares only in Ghataprabha, by June 1979. Then they have said total potential created to end of June 1980 is 1.43 lakh hectares. After this it is said no further potential possible now. I am not trying to cast any aspersions. I am only trying to point out the steps to be taken by the Government to complete these projects and also about the incorrect informations that are given here. The information given here about the right bank canal is not correct. They have not been able to create the anticipated potential. But still they say in the report that they have created so much of potential and all that. ಆದುದರಿಂದ ಈ ಬಗ್ಗೆ ತಾವು ಏನೂ ಮಾಡಿಲ್ಲವೆಂಬ ಅಭಿಪ್ರಾಯಕ್ಕೆ ನಾವು ಬರಬೇಕಾಗುತ್ತದೆ, Again, if we take price escalation we require another Rs. 172 crores to complete the project. If you could give Rs. 5-6 crores annually it will take 23 years. Even if you are able to give Rs. 10 crores it will take not less than 15 years to complete this project. This is the position.

Now I come to Harangi project, Estimated cost at 1980 level of rates) Rs. 85 crores. Expenditure on this project to end of March 1981 is about Rs. 35 crores and the budget grant for the year 1981-82 is Rs. 5.60 crores. So, irrigable area is 1.64 acres ie:, upto end of June 1980. Out of this we have been able to provide water to the extent of 7,300 acres particularly in Kushalnagar Taluka Then, we have Rs 50 crores worth of balance work By investing Rs. 6 crores annually it will take 8 years to complete this project. Further if we take 15% price escalation it will be 50 plus 60 it comes to Rs. 110 crores. So, how much money we should have put and how much money we have been able to spend this is to be seriously looked into. Here I must also compiment our Finance Minister because he has tried his best to provide more funds. He has been able to provide Rs. 10 crores more this year...I am also happy to say that t e Finance Minister was pleased to say that he will do his best to provide Rs. 10 to 12 Crores in the annual plan for the Cauvery Valley Project. I really appreciate his efforts to get more funds.

There is a will to complete all these projects. I compliment for it. But, I am trying to point out the magnitude and enormity of the problem. Kabini Project was started in the year 1967. but till today, we have not been able to complete the same. The estimated cost was Rs. 24 crores. The estimated cost rose to Rs. 79 crores in the year 1979. Total expenditure incurred uptil notil now is Rs. 61 crores. For the year 1981-82, you have provid d Rs. 7 crores, The area irrigable is 1 50,000 hectares. ಎಸ್ಟಿಮೇಟೆಡ್ ಕಾಸ್ಟ್ ೧೯೬೭ ರಲ್ಲಿ ೨೪ ಕೋಟಿ ರೂಪಾಯಿ ಇದ್ದದ್ದು ೧೯೭೯ರ ವೇಳೆಗೆ ೭೯ ಕೋಟಿ ರೂಪಾಯಿಗೆ ಬಂತು. ೧೯೮೧ರ ಮಾರ್ಚ್‌ವರೆಗೆ ೬೧ ಕೋಟಿ ರೂಪಾಯಿ ಖರ್ಚಾಗಿವೆ. ೧೯೮೧-೮೨ರಲ್ಲಿ ಕಬಿನಿ ಯೋಜನೆಗಾಗಿ ೭ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ, ಆ ಯೋಜನೆಯಿಂದ ಒಂದು ಲಕ್ಷದ ೫೦ ಸಾವಿರ ಹೆಕ್ಟೇರ್ ಜಮೀನಿಗೆ ನೀರೊದಗುತ್ತದೆ. ಆ ೭೯ ಕೋಟಿಗೆ ಇನ್ನೂ ೨೩ ಕೋಟಿ ಹೆಚ್ಚಿಗೆ ಸೇರಿಸಬೇಕಾಗುತ್ತದೆ. ಅಂದಾಗ ೧೯೮೨ ರವರೆಗೆ ಈ ಯೋಜನೆಗಾಗಿ ಒದಗಿಸಿರ ತಕ್ಕ ಒಟ್ಟು ಹಣ ೧೦೨ ಕೋಟಿ ರೂಪಾಯಿ ಆಗುತ್ತದೆ; ಅದರಲ್ಲಿ ಈಗ ೬೧ ಕೋಟಿ ರೂಪಾಯಿ ಖರ್ಚು ಮಾಡಿದ್ದಾಗಿದೆ. ಹೋದ ವರ್ಷ ೭ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಅದನ್ನು ತೆಗದರೂ ಕೂಡ, ನಾವು ಈ ಕಬಿನಿ ಯೋಜನೆಯನ್ನು ಪೂರ್ಣಗೊಳಿಸಬೇಕಾದರೆ (ಶೇಕಡ ೧೫ ರಷ್ಟು ಎಸ್ಕಲೇಷನ್ ಪ್ರೈಸ್ ಸೇರಿಸಿ) ಇನ್ನೂ ೭೮ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇಲ್ಲದಿದ್ದರೆ ಅದು ೧೯೯೭ಕ್ಕೂ ಪೂರ್ಣಗೊಳ್ಳುವುದಿಲ್ಲ. ಅಲ್ಲಿಗೆ ಯೋಜನೆಯನ್ನು ಪ್ರಾರಂಭಿಸಿ ೨ ದಶಕಗಳಾಗುತ್ತವೆ. ಏಕೆಂದರೆ ಒಮ್ಮೆಲೇ ಅಷ್ಟು ದುಡ್ಡು ಕೊಟ್ಟು ಮುಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಡ್ಯಾಂ ಕೆಲಸ ಪೂರ್ಣವಾಗಿದ್ದು ನೀರು ತುಂಬಿದೆ, ಇನ್ನು ಇತರೆ ಕೆಲಸ ಕಾರ್ಯಗಳು ಆಗಬೇಕಾಗಿವೆ. ಇನ್ನು ಅದೇ ರೀತಿ, ಹೇಮಾವತಿ ಪ್ರಾಜೆಕ್ಟನ್ನು ತೆಗೆದುಕೊಂಡರೆ ಅದರ ಒರಿಜಿನಲ್ ಕಾಸ್ಟ್ ೧೩ ಕೋಟಿ ೩೦ ಲಕ್ಷ ರೂಪಾಯಿಗಳು. ೧೯೬೭ ರ ಲೆಕ್ಕದಲ್ಲಿ. ರಿವೈಸ್ಡ್ ಎಸ್ಟಿಮೇಟೆಡ್ ಕಾಸ್ಟ್ ೨.೮೦ ಕೋಟಿ ರೂಪಾಯಿಗಳು ಕೆಲಸ ೧೯೬೯ ರಲ್ಲಿ ಪ್ರಾರಂಭವಾಗಿ ಜೂನ್ ೧೯೮೧ ರಲ್ಲಿ ರಿಸರ್ವಾಯರ್ ಆಯಿತು. ಅದರಿಂದ ೨.೮೯ ಲಕ್ಷ ಹೆಕ್ಟೇರ್ ಜಮೀನಿಗೆ ನೀರೊದಗುತ್ತದೆ. ಪುನಃ ಆ ಯೋಜನೆಯು ಸಲುವಾಗಿ ೧೯೮೧-೮೨ನೇ ಸಾಲಿಗೆ ೧೧ ಕೋಟಿ ರೂಪಾಯಿಗಳನ್ನು ಮತ್ತು ೧೯೮೨-೮೩ ನೇ ಸಾಲಿಗಾಗಿ ೨೦ ಕೋಟಿ ರೂಪಾಯಿಗಳನ್ನು ಹೆಚ್ಚು ಒದಗಿಸಲಾಗಿದೆ. I must say he has done his best to increase the grants. With all this, you will

appreciate how difficult it is for the Government to complete this Project inspite of his best efforts. There is 280% increase in the price escalation. Upto the year 1981, the total grant given is Rs. 81 crores, and if we give Rs. 20 crores it will become approximately Rs. 100 crores, So,, again we have to spent again 95 to 100 crores of rupees. Therefore, due to price escalation totally it will come to roughly Rs. 214 crores for the remaning works to be done. Even at this rate, it will take 10 years to complete. After ten years it will cost us approximately Rs. 500 crores. Under these circustances, how are we to go ahead with the development of Karnataka ? ನಮ್ಮ ಕರ್ನಾಟಕ ಅಭಿವೃದ್ಧಿಯಾಗಬೇಕಾದರೆ ಎರಡು ಸೌಲಭ್ಯಗಳು ಬಹಳ ಮುಖ್ಯ; ಮೊದಲನೆಯದಾಗಿ ಪವರ್ ಮತ್ತು ಇರಿಗೇಷನ್. ಇವೆರಡನ್ನು ಬಿಟ್ಟು ಬೇರೆ ಯಾವುದರಿಂದಲೂ ಏನೂ ಮಾಡುವುದಕ್ಕಾಗುವುದಿಲ್ಲ. ಬರೀ ಕೈಗಾರಿಕೆಗಳು ಎಷ್ಟು ಬೆಳೆದರೂ ಏನೂ ಪ್ರಯೋಜನ ? ಮುಖ್ಯವಾಗಿ ವ್ಯವಸಾಯ ಅಭಿವೃದ್ಧಿಯಾಗಬೇಕು, ಅದಕ್ಕೆ ಅವಶ್ಯಕವಾಗಿ ನೀರಾವರಿ ಬೇಕು. ಆ ನೀರಾವರಿಗೆ ಕೆರೆ, ಬಾವಿ ಹಾಗೂ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳು ಮತ್ತೊಂದು ಬರಬೇಕು. ಇವೆಲ್ಲಕ್ಕೂ ಹೆಚ್ಚು ದುಡ್ಡು ಬೇಕು. ಈ ಸಂದರ್ಭದಲ್ಲಿ ಒಂದು ಮಾತು ಹೇಳುತ್ತೇನೆ: ಅವರು ಇದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ಆಗುತ್ತಿತ್ತೋ ಇಲ್ಲವೋ ಗೊತ್ತಿಲ್ಲ ; 'ನಾವು ಇಷ್ಟೊಂದು ಹೆಚ್ಚಿಗೆ ವಸೂಲ್ ಮಾಡಿದ್ದೇವೆಂದು' ಹೇಳಿದ್ದಾರೆ. ನೀವು ವಸೂಲ್ ಮಾಡಿದ್ದೀರೆಂದೇ ಇಟ್ಟುಕೊಳ್ಳೋಣ, ಆದರೆ ನೀವು ಎಷ್ಟೇ ಮಾಡಿದರೂ ಕೂಡ ಇಷ್ಟೊಂದು ಪ್ರಾಜೆಕ್ಟ್‌ಗಳನ್ನು ಪೂರ್ಣಗೊಳಿಸಬೇಕಾದರೆ ಇನ್ನೂ ೧೦–೧೫ ವರ್ಷಗಳು ಬೇಕಾಗುತ್ತದೆ. ಅಲ್ಲಿಯವರೆಗೆ ಮಾಡುವುದಕ್ಕಾಗುವುದಿಲ್ಲ... ನಾನು ಪವರ್ ಬಗ್ಗೆ ಹೇಳುತ್ತಿಲ್ಲ. ಬರೀ ಇರಿಗೇಷನ್ ಬಗ್ಗೆ ಹೇಳುತ್ತಿದ್ದೇನೆ. ಇದಕ್ಕೆ ಒಂದು ಮಾತು ಹೇಳುವುದಾದರೆ, I pose this question before the Government so that let them post the same before the Prime Minister their leader and our Prime Minister. The I. M. F. loan is to the tune of Rs. 500 billion dollars. that means, Rs 5,000 crores and odd, Out of which let them give Rs. 1,000 crores to Karnataka State. I am not joking. I am seriously talking about it Otherwise, what for this loan is ? The whole money or most of it will go to the Private sector because it is guided by the I. M. F. authorities. It is controlled by someone else conditionally, ಅವರು, ಕೇಳಿದರೆ ಕೊಡುತ್ತೇವೆಂದು ಹೇಳುತ್ತಿದ್ದಾರೆ. ನಮ್ಮ ದೇಶದ ಅಭಿವೃದ್ಧಿಯಾಗಬೇಕಾದರೆ ೫೦ ಪರ್ಸೆಂಟ್ ಇರಿಗೇಷನ್ ಪೊಟೆನ್ಷಿಯಲ್ ರಿವರ್ನಲ್ಲಿ ಇದೆ ಅದನ್ನು ಅಭಿವೃದ್ಧಿಪಡಿಸಬೇಕಾಗುತ್ತದೆ. ಅದನ್ನು ಅಭಿವೃದ್ಧಿಪಡಿಸದೆ ನಮ್ಮ ದೇಶದ ಪರಿಸ್ಥಿತಿಯನ್ನು ಉತ್ತಮಪಡಿಸುವುದು ಹೇಗೆ ? ಜಾಬ್ ಕ್ರಿಯೇಟ್ ಮಾಡುವುದು ಹೇಗೆ ಹೆವಿ ಇಂಡಸ್ಟ್ರಿಗಳನ್ನು ತಂದಾಕ್ಷಣ ಜಾಬ್ ಕ್ರಿಯೇಟ್ ಆಯಿತೆ? ಇಲ್ಲ, ಅಸೆಟ್ ಜಾಸ್ತಿ ಆಯಿತು. ಒಂದಕ್ಕೆ ಬದಲು ಎರಡು ಮನೆ ಅಷ್ಟೆ. Is it going to help our country I ask I am not blaming them directly. These are the problems which are before us and it is the responsibility of everybody to solve the same. We have to take a serious view of this matter and make the Central Government understand. They cannot simply hoodwink or browbeat by just saying, we are bringing a huge loan from the I. M. F. What are these loans for ? Is it merely to save foreign exchange ? Foreign exchange consists only of petroleum products. ಅವರು ಹೇಳುತ್ತಾರೆ. ಇಷ್ಟು ಖರ್ಚಾದರೆ ಹೇಗೆ ಎಂದು. ಪೆಟ್ರೋಲ್ ಮತ್ತು ಡೀಸಲ್ಲಿನ ಉಪಯೋಗವನ್ನು ಕಡಿಮೆ ಮಾಡಿ ಸೈಕಲ್‌ನಲ್ಲಿ ತಿರುಗಾಡೋಣ. ಎಲ್ಲಿ ಅನಿವಾರ್ಯ ಪ್ರಸಂಗ ಬರುತ್ತದೋ ಅಂಥ ಕಡೆ ಉಪಯೋಗಿಸಲಿ. ಮಂತ್ರಿಗಳು ಕೂಡ ಸೈಕಲ್‌ನಲ್ಲೇ ತಿರುಗಲಿ ಎಂದು

ಹೇಳುವುದಿಲ್ಲ. ಅವರೂ ಕೂಡ ಕಾರಿನ ಉಪಯೋಗವನ್ನು ಸಾಧ್ಯವಾದಷ್ಟು ಕಡಿಮೆ ಮಾಡಬೇಕಾಗುತ್ತದೆ. ಐದು ಸಾವಿರ ಕೋಟಿ ರೂಪಾಯಿ ಸಾಲಕ್ಕೆ ನಾವು ಪ್ರತಿಯೊಬ್ಬರೂ ಜವಾಬ್ದಾರರಾಗಿದ್ದೇವೆ. ನಾಳೆ ದಿವಸ ನಿಮ್ಮ ನಮ್ಮ ಮಕ್ಕಳು ಅದನ್ನು ತೀರಿಸಬೇಕಾಗುತ್ತದೆ. ಆ ಹಣದಲ್ಲಿ ನಮಗೆ ಒಂದು ಭಾಗವನ್ನು ಕೊಡಲಿ. ಅದರಿಂದ ಪ್ರಾಜೆಕ್ಟ್‌ಗಳನ್ನು ಇಂಪ್ರೂವ್ ಮಾಡೋಣ. ಆಗ ನಮ್ಮ ಕರ್ನಾಟಕದಲ್ಲಿ ಸುಭಿಕ್ಷವಾಗುತ್ತದೆ. I am not going into detail with regard to law and order situation.

ಅಧ್ಯಕ್ಷರೆ, ಪೋಲೀಸ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಒಂದೇ ಒಂದು ಮಾತನ್ನು ಸರ್ಕಾರಕ್ಕೆ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಇವರು ಬಂದಕೂಡಲೇ ತಮಗೆ ಬೇಕಾದವರನ್ನು ತಂದರು. ಅದರ ಬಗ್ಗೆ ನನ್ನ ಅಭ್ಯಂತರ ಇಲ್ಲ. ಇವರು ಸೀನಿಯಾರಿಟಿ ನೋಡಲಿಲ್ಲ, ಮತ್ತೊಂದು ನೋಡಲಿಲ್ಲ, ಯಾರು ಅವರಿಗೆ ಸರಿಯಾಗಿ ಕಾಣಿಸಿತು ಅವರನ್ನು ಐ. ಜಿ. ಪಿ. ಮಾಡಿದರು. ಆ ರೀತಿ ಮಾಡುವಾಗ ಅನೇಕ ಜನರಸೀನಿಯಾರಿಟಿ ಓವರ್‌ಲುಕ್ ಮಾಡಿದ್ದು ಒಂದು ಆಯಿತು. ನಾವು ಇದ್ದಾಗ ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಒಂದು ಪೋಸ್ಟ್ ಕ್ರಿಯೇಟ್ ಮಾಡಿ ಒಬ್ಬರನ್ನು ಹಾಕಿದ್ದೆವು. ಅದನ್ನು ಇವರು ಏನು ಮಾಡಿದರು ಅಂದರೆ ಆ ಪೋಸ್ಟ್ ಅಬಾಲಿಷ್ ಮಾಡಿ ಅವರನ್ನು ಮನೆಗೆ ಕಳುಹಿಸಿದರು. ಇನ್ನು ಮುಂದಕ್ಕೆ ಎಕ್ಸ್‌ಟೆನ್‌ಷನ್ ಕೊಡುವುದು ಬೇಡ ಅಂತ ಹೇಳಿ ಮಾಡಿದರು ಬಹಳ ಸಂತೋಷ. ಇವರು ಪುನಃ ೬ ತಿಂಗಳು ಕಳೆದ ಮೇಲೆ ಮತ್ತೆ ಏತಕ್ಕೆ ಕ್ರಿಯೇಟ್ ಮಾಡಿದರು. ಆ ಬಗ್ಗೆ ನಿಮ್ಮ ಮೋಟೀವ್ಸ್ ಕ್ವೆಶ್ಚನ್ ಮಾಡಬೇಕಾಗುತ್ತದೆ. ನೀವು ಅಬಾಲಿಷ್ ಮಾಡಿಬಿಟ್ಟು ಈಗ ಕೋರ್ಟಿಗೆ ಹೋಗಿ ಮುಖಕ್ಕೆ ಮಸಿ ಬಳಿಸಿಕೊಂಡಿದ್ದೀರಿ...The High Court has observed that it is a wrong order.

ಅಧ್ಯಕ್ಷರು.—ಅಪೀಲಿನಲ್ಲಿ ಇದೆ... An appeal has been preferred in the matter.

ಶ್ರೀ ಡಿ. ದೇವರಾಜ್ ಅರಸ್.—ಹೈಕೋರ್ಟ್‌ಜಡ್ಜ್‌ಮೆಂಟ್ ದೇಶದ ಮುಂದೆ ಇದೆ... As it is to-day, the High Court judgement stands. It has been observed by the High Court that the selection was not according to rules and regulations.

ಶ್ರೀ ವೈ. ರಾಮಕೃಷ್ಣ.—ಅದು ಫೈನಲ್ ಜಡ್ಜ್‌ಮೆಂಟ್ ಅಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಅವರು ಅಪೀಲು ಹಾಕಿಕೊಂಡಿದ್ದಾರೆ, ಆಮೇಲೆ ಫೈನಲ್ ಅಂತ ಅವರು ಹೇಳುತ್ತಿದ್ದಾರೆ, ಅದು ಬಂದಾಗ ನೋಡೋಣ. ಅದು ಬಂದಾಗ ಮೀಸೆ ತಿರುಗಿಸಿ ಕೊಂಡು ನಾವು ಮಾಡಿದ್ದು ಸರಿ ಅಂತ ಹೇಳಿ. No stay has been granted in the matter. I continue to harp on the present High Court judgement till it is set aside in Appeal. ಪೋಲೀಸ್ ಅಡ್ಮಿನಿಸ್ಟ್ರೇಷನ್ ಕೇಳುವುದಕ್ಕೆ, ಬುಡದಲ್ಲಿ ಯಾವಾಗ ಕೆಡುತ್ತಿದೆಯೋ ಬಾಕಿ ಎಲ್ಲಾ ಕೆಡುತ್ತಾ ಬರುತ್ತದೆ. ಯಾರು ಒಳ್ಳೆಯ ದಕ್ಷರಾದಂಥ ಅಧಿಕಾರಿಗಳು ಇದ್ದಾರೋ ಅವರನ್ನು ಕಿತ್ತುಹಾಕುವುದು, ಇವರು ಹೇಳುವಂತೆ ಕೇಳುವಂಥ ತರಲೆಯಂಥವರನ್ನು ತೆಗೆದುಕೊಂಡು ಬಂದು ಹಾಕಿಕೊಳ್ಳುವುದು. ಆಡಳಿತದ ಬಗ್ಗೆ ಹೇಳಬೇಕೆಂದರೆ ಪೋಲೀಸ್ ಅಡ್ಮಿನಿಸ್ಟ್ರೇಷನ್ ಬಹಳ ಸೂಕ್ಷ್ಮವಾಗಿ ನೋಡತಕ್ಕಂಥ ಡಿಪಾರ್ಟ್‌ಮೆಂಟ್. ಬೇರೆ ದೇಶಕ್ಕೆ ಹೋಲಿಸಿಕೊಂಡರೆ ನಮ್ಮದು ಎಷ್ಟೋ ಚೆನ್ನಾಗಿದೆ. ಒಂದು ಸಾವಿರ ಜನ ಅಲ್ಲಿ ತಲೆಹೊಡೆದಿದ್ದರೆ ಇಲ್ಲಿ೧೦೦ ಜನ ಅಂದರೆ... That is not the way to look into the things. What is the morale of the administration, particularly, of the police department to-day? Is it sound? The morale of the administration has gone down terribly due to interference of the Government.

The next point that I would like to submit is about the food production. They have said that they are going to get about 80 lakh tonnes of foodgrains. Perhaps they are expecting more foodgrain production since they hope that more area under various projects is likely to be brought under cultivation. I have taken pains to study

this aspect of the matter. The agricultural production depends upon what they want to do with Major, Medium and Minor irrigation. What is the money they have allotted for Agriculture? Last year, Rs. 65 and odd crores were alloted and this year they have allotted Rs. 68 and odd crores for Agriculture and allied matters Is this Rs. three and odd crores sufficient for the development of Agriculture? I am sure, more than half of it will go for TA and DA of the Paraphernalia. I do not understand, what improvement they are going to do in respect of Agriculture. Above all they are expecting about 15 lakh tonnes of oil-seeds production. How is it possible? I really wonder. Sir, I think you have already cautioned me to conclude my speech. I thank the Chair for the time given to me and for the patient indulgence of this House for having heard me so long.

ಅಧ್ಯಕ್ಷರು.—ಈಗ ೨ ಗಂಟೆ ಆಗಿದೆ. ಮಧ್ಯಾಹ್ನ ಕುಳಿತುಕೊಳ್ಳುವಂತಾದ್ದು ಇತ್ತು ಈಗ ಆ ಪ್ರೋಗ್ರಾಂ ಇಲ್ಲ. ವಿರೋಧ ಪಕ್ಷದ ಕಡೆಯಿಂದ ಮಾತನಾಡತಕ್ಕವರು ಇನ್ನೂ ೫ ಜನ ಇದ್ದಾರೆ. ಈಗಾಗಲೇ ೧೧ ಗಂಟೆಗಳ ಕಾಲ ತಮಗೆ ಆಗಿದೆ. We shall conclude here the General Discussion on the Budget. On 29th, the Hon. Minister for Finance will directly start the reply to the debate.

ಶ್ರೀ ಕೆ. ಬಿ. ಮಲ್ಲಪ್ಪ.—ಅಧ್ಯಕ್ಷರೆ, ತಾವು ವಿರೋದ ಪಕ್ಷದ ಸದಸ್ಯರಿಗೆ ಭಾರಿ ಸಮಯ ಕೊಟ್ಟಿದ್ದೇವೆಂದು ಹೇಳಿದಿರಿ. ಆ ಬಗ್ಗೆ ನಾನು ತಮ್ಮನ್ನು ಪ್ರಶ್ನೆ ಮಾಡುವುದಿಲ್ಲ. ಆದರೆ ಕೊಟ್ಟಿರುವವರಿಗೆ ಕೊಟ್ಟಿದ್ದೀರಿ. ಯಾರು ಮಾತನಾಡಿಲ್ಲವೋ, ಯಾರಿಗೆ ಅವಕಾಶ ಕೊಡಬೇಕಾಗಿತ್ತೋ ಅವರಿಗೆ ಕೊಟ್ಟಿಲ್ಲ. ನಾವು ಹಿಂದಿನ ಬೆಂಚಿನಲ್ಲಿ ಕುಳಿತಿರುವವರು. ನಿಮ್ಮ ಕಣ್ಣು ನಮ್ಮ ಕಡೆ ಬೀಳುವುದಿಲ್ಲ ಈ ರೀತಿ ಆದರೆ ನಾವು ಈ ಸಭೆಯಲ್ಲಿ ಕೆಲಸಮಾಡುವುದು ಹೇಗೆ? ನಮ್ಮ ಕಾನ್‌ಸ್ಟಿಟ್ಯುಯೆನ್ಸಿ ಕಷ್ಟ ಸುಖಗಳನ್ನು ಹೇಳಿಕೊಳ್ಳುವುದು ಹೇಗೆ? ನಾವು ಏನು ಮಾಡಬೇಕು. ತಾವು ನನ್ನನ್ನು ಕರೆಯುತ್ತೀರಾ ಎಂದು ನಾನು ಪ್ರಾರಂಭದಿಂದಲೂ ತಮ್ಮ ಮುಖವನ್ನೇ ನೋಡಿ ಕೊಂಡುಬಂದೆ. ತಮಗೆ ಕರುಣೆಯೇ ಬರಲಿಲ್ಲ ಅಂದರೆ ನಾವು ಏನು ಮಾಡುವುದು. ಆದ್ದರಿಂದ, ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದುವರೆಗೂ ಮಾತನಾಡದೇ ಇರತಕ್ಕಂಥ ಸದಸ್ಯರಿಗೆ ಸೋಮವಾರ ಒಂದು ಗಂಟೆ ಕಾಲ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ತಾವು ಲಿಸ್ಟ್ ಕೊಟ್ಟಿರುತ್ತೀರಿ... When the debate is interesting, I will have to allow some time. ಈಗ ತಮ್ಮ ಹೆಸರು ಇದೆ. ಈಗ ತಮ್ಮ ಹೆಸರನ್ನು ಕರೆದರೆ ತಾವು ಎಷ್ಟು ನಿಮಿಷದಲ್ಲಿ ಮುಗಿಸುತ್ತೀರಿ ಅಂತ ಹೇಳಿದರೆ ಕರೆಯಬಹುದು.

ಶ್ರೀ ಕೆ. ಬಿ. ಮಲ್ಲಪ್ಪ.—ಅಧ್ಯಕ್ಷರೆ. ಈಗ ಬೇಡ ಸೋಮವಾರ ಮಾತನಾಡುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಅಧ್ಯಕ್ಷರೆ, ಸೋಮವಾರ ಬೆಳಿಗ್ಗೆ ಇಟ್ಟುಕೊಳ್ಳುವುದರಿಂದ. ಊರಿಗೆ ಹೋದವರಿಗೆ ಕಷ್ಟವಾಗುತ್ತದೆ. ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಒಂದು ಗಂಟೆ ಚರ್ಚೆಗೆ ಅವಕಾಶ ಕೊಟ್ಟು ಅನಂತರ ರಿಪ್ಲೈ ಮಾಡಲಿಕ್ಕೆ ಅವಕಾಶ ಕೊಟ್ಟರೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ಸೋಮವಾರ ಬೆಳಿಗ್ಗೆ ಪ್ರಶ್ನೋತ್ತರಗಳು ಇರುವುದಿಲ್ಲ. ನೇರವಾಗಿ ಚರ್ಚೆ ಪ್ರಾರಂಭವಾಗಿ ೯ ಗಂಟೆಯಿಂದ ೧೦ ಗಂಟೆಯವರೆಗೂ ಚರ್ಚೆ ನಡೆಯುತ್ತದೆ. ಅಷ್ಟು ಸಮಯದಲ್ಲಿ ಎಷ್ಟು ಜನರು ಮಾತನಾಡಲಿಕ್ಕೆ ಸಾಧ್ಯ ಅಷ್ಟು ಜನರು ಮಾತನಾಡಬಹುದು. ೧೦ ಗಂಟೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

MR. SPEAKER.—The House now stands adjourned to meet on Monday at 9.00 A. M.

The house adjourned at Two of the Clock to meet at again at Nine of the Clock on Monday the 29th March, 1982.